ಸಂಪಾದಕರು :
ಎಂ.ಎಸ್. ವಿಕಾಸ್

# ಜನತಾ ವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ಶುಕ್ರವಾರ, ನವೆಂಬರ್ 10, 2023
ದಾವಣಗೆರೆ, ಪುಟ : 6 ರೂ : 5
ಸಂಪುಟ : 50 ಸಂಚಿಕೆ : 179 RNI : 27369/75

50 1974 2023

janathavani@mac.com
www.janathavani.com
08192 254736 91642 99999


## ಸೋಲಾರ್ ವಿದ್ಯುತ್‌ಗೆ ಪ್ರೋತ್ಸಾಹ

### ಕೃಷಿ ಪಂಪ್‌ಸೆಟ್‌ಗಳ ಹೊಸ ವಿದ್ಯುತ್ ಸಂಪರ್ಕದ ಸಬ್ಸಿಡಿ ರದ್ದು



ಬೆಂಗಳೂರು, ನ.9 - ಗೃಹ ಜ್ಯೋತಿ ನೀಡಿದ ಸಿದ್ದರಾಮಯ್ಯ ಸರ್ಕಾರ ಕೃಷಿ ಪಂಪ್‌ಸೆಟ್‌ಗಳ ಹೊಸ ವಿದ್ಯುತ್ ಸಂಪರ್ಕಕ್ಕಿದ್ದ ಸಬ್ಸಿಡಿ ರದ್ದು ಮಾಡಿದೆ.

ಈ ಸಂಬಂಧ ಆದೇಶ ಹೊರಡಿಸಿರುವ ಸರ್ಕಾರ, ಅಕ್ಟೋಬರ್ 22 ನಂತರ ನೋಂದಾಯಿಸಲ್ಪಡುವ ಕೃಷಿ ಪಂಪ್‌ಸೆಟ್‌ಗಳಿಗೆ ಮೂಲ ಸೌಕರ್ಯವನ್ನು ರೈತರು ಸ್ವಂತ ವೆಚ್ಚದಲ್ಲಿ ಮಾಡಿಸಿಕೊಳ್ಳಬೇಕು ಎಂದು ತಿಳಿಸಿದೆ.

ಸರ್ಕಾರದ ಈ ನಿರ್ಧಾರದಿಂದ ರೈತರು ಹೊಸ ಸಂಪರ್ಕ ಪಡೆಯಲು ಇನ್ನು ಮುಂದೆ ಎರಡು ಲಕ್ಷ ರೂ. ವರೆಗೂ ವೆಚ್ಚ ಮಾಡಬೇಕು. ಈ ಮೊದಲು 22ರಿಂದ 25 ಸಾವಿರ ರೂ.ಗೆ ವಿದ್ಯುತ್ ಸಂಪರ್ಕ ಪಡೆದುಕೊಳ್ಳುತ್ತಿದ್ದರು.

ವಿದ್ಯುತ್ ಸರಬರಾಜು ಕಂಪನಿಗಳು 2015ರಿಂದ ಸರ್ಕಾರ ಹೊರಡಿಸಿರುವ ಆದೇಶದವರೆಗೂ ಅಕ್ರಮ ಪಂಪ್‌ಸೆಟ್ ಗಳನ್ನು ಸಕ್ರಮಗೊಳಿಸಲು ಮೂಲ ಸೌಕರ್ಯ ಕಲ್ಪಿಸಲು ಪರ್ಯಾಯ ಮಾರ್ಗ ಹಿಡಿದಿದೆ. ಅಕ್ರಮ ಸಂಪರ್ಕ ಹೊಂದಿರುವವರು ಸೋಲಾರ್ ವಿದ್ಯುತ್ ಬಳಕೆಗೆ ಆದ್ಯತೆ ನೀಡಬೇಕು. ಅಂಥವರಿಗೆ ಕೇಂದ್ರ ಸರ್ಕಾರ ಶೇ.30 ಹಾಗೂ ರಾಜ್ಯ ಸರ್ಕಾರ ಶೇ.30ರಷ್ಟು ಸಬ್ಸಿಡಿ ನೀಡುತ್ತಿತ್ತು. ಇದೀಗ ರಾಜ್ಯ ಸರ್ಕಾರ ಸಬ್ಸಿಡಿ ಪ್ರಮಾಣವನ್ನು ಶೇ.30ರಿಂದ ಶೇ.50ಕ್ಕೆ ಹೆಚ್ಚಿಸಿದೆ.

ಫಲಾನುಭವಿ ರೈತರು ಶೇ.20ರಷ್ಟು ಹಣ ಸಂದಾಯ ಮಾಡಿ ಸೌರ ವಿದ್ಯುತ್ ಸಂಪರ್ಕ ಪಡೆದು ಅಕ್ರಮ ವಿದ್ಯುತ್ ಸಂಪರ್ಕವನ್ನು ಸಕ್ರಮ ಮಾಡಿಕೊಳ್ಳಬಹುದಾಗಿದೆ. ವಿದ್ಯುತ್ ಸರಬರಾಜು ಕಂಪನಿಗಳು ಅಕ್ರಮ ಪಂಪ್‌ಸೆಟ್‌ಗಳನ್ನು ಸಕ್ರಮಗೊಳಿಸಲು ಹೂಡುತ್ತಿದ್ದ ಬಂಡವಾಳವನ್ನು ಸೌರಶಕ್ತಿ ಅಳವಡಿಕೆಗೆ ಬಳಸಲು ಹೆಚ್ಚು ಒತ್ತು ನೀಡುವಂತೆ ನಿರ್ದೇಶಿಸಿದೆ.

## ಗುತ್ತಿಗೆದಾರರ ಬಿಲ್ ಪಾವತಿಗೆ 8% ಕಮೀಷನ್



ಬೆಂಗಳೂರು, ನ. 9 – ಗುತ್ತಿಗೆದಾರರ ಬಿಲ್ ಪಾವತಿಸಲು ಶೇ.8ರ ಕಮೀಷನ್ ಕೇಳಲಾಗುತ್ತಿದೆ ಎಂದು ಬಿಜೆಪಿ ನಾಯಕ ಹಾಗೂ ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಆರೋಪಿಸಿದ್ದಾರೆ.

ರಾಜ್ಯ ಕಾಂಗ್ರೆಸ್ ಸರ್ಕಾರದ ಕಾರ್ಯನಿರ್ವಹಣೆ ಶೈಲಿ ಹಾಗೂ ನೀತಿಗಳ ವಿರುದ್ಧ ನಗರದಲ್ಲಿ ಮೂರು ದಿನಗಳ ಪ್ರತಿಭಟನೆ ನಡೆಸಲಾಗುವುದು ಎಂದೂ ಅವರು ಹೇಳಿದ್ದಾರೆ.

ಗುತ್ತಿಗೆದಾರರಿಗೆ ಸರ್ಕಾರ ಸಮಯಕ್ಕೆ ಸರಿಯಾಗಿ ಹಣ ಪಾವತಿಸುತ್ತಿಲ್ಲ. ಹೀಗಾಗಿ ಯಾವುದೇ ಗುತ್ತಿಗೆದಾರ ಕೆಲಸ ಮಾಡಲು ಮಂದೆ ಬರುತ್ತಿಲ್ಲ. ಬಾಕಿ ಇರುವ ಬಿಲ್ ಪಾವತಿಸಲು ಶೇ.7.5-8ರ ಕಮೀಷನ್ ಕೇಳಲಾಗುತ್ತಿದೆ ಎಂದೂ ಯಡಿಯೂರಪ್ಪ ಆರೋಪಿಸಿದ್ದಾರೆ.

# ಕಾಂತರಾಜ್ ವರದಿ ಅವೈಜ್ಞಾನಿಕ

## ಮತ್ತೊಮ್ಮೆ ಜಾತಿ ಗಣತಿ ನಡೆಸಲು ಮಹಾಸಭಾ ಅಧ್ಯಕ್ಷ ಶಿವಶಂಕರಪ್ಪ ಒತ್ತಾಯ

ಬೆಂಗಳೂರು, ನ. 9 - ಹಿಂದುಳಿದ ವರ್ಗಗಳ ಆಯೋಗದ ವರದಿಯನ್ನು ಒಕ್ಕಲಿಗ ಸಮುದಾಯ ವಿರೋಧ ಮಾಡಿದ ಬೆನ್ನಲ್ಲೇ ಲಿಂಗಾಯತ ಸಮುದಾಯವೂ ಅದೇ ಹಾದಿಯನ್ನು ತುಳಿದಿದೆ.

ಕಾಂತರಾಜ್ ಅಧ್ಯಕ್ಷರಾಗಿದ್ದ ಹಿಂದುಳಿದ ವರ್ಗಗಳ ಆಯೋಗದ ವರದಿ ಅವೈಜ್ಞಾನಿಕವಾಗಿದೆ. ಅಲ್ಲದೆ, ಲೋಪ-ದೋಷಗಳಿಂದ ಕೂಡಿದ್ದು, ಅದನ್ನು ಸ್ವೀಕರಿಸಬಾರದು ಎಂದು ಅಖಿಲ ಭಾರತ ವೀರಶೈವ ಮಹಾ ಸಭಾ ಇಂದಿಲ್ಲಿ ರಾಜ್ಯ ಸರ್ಕಾರವನ್ನು ಒತ್ತಾಯಿಸಿದೆ.

ಜಾತಿಗಣತಿ ಅಗತ್ಯವಿದ್ದರೆ ಮತ್ತೊಮ್ಮೆ ಮನೆ ಮನೆಗೆ ಭೇಟಿ ನೀಡಿ ವೈಜ್ಞಾನಿಕ ಸಮೀಕ್ಷೆ ನಡೆಸಿ ವರದಿ ಪಡೆದುಕೊಳ್ಳಬೇಕು. ನಾವು ಜಾತಿ ಗಣತಿ ವಿರೋಧಿಗಳಲ್ಲ. ಆದರೆ, ಸಮರ್ಪಕ ಹಾಗೂ ವಾಸ್ತವ ಸಂಗತಿಗಳಿಂದ ಕೂಡಿರಬೇಕು ಎಂದು ಮಹಾಸಭಾ ಅಧ್ಯಕ್ಷ ಹಾಗೂ ಆಡಳಿತ ಪಕ್ಷದ ಶಾಸಕ ಶಾಮನೂರು ಶಿವಶಂಕರಪ್ಪ ಹೇಳಿದ್ದಾರೆ.

ಸಭೆಯ ನಂತರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ನಾಲ್ಕು ಗೋಡೆಗಳ ನಡುವೆ ಕುಳಿತು ಸಿದ್ಧಪಡಿಸಿರುವ ವರದಿಯನ್ನು ಒಪ್ಪಲು ಸಾಧ್ಯವಿಲ್ಲ. ಆಧಾರ್ ಕಾರ್ಡ್ ಆಧಾರವಾಗಿಟ್ಟುಕೊಂಡು ಮತ್ತೆ ಸಮೀಕ್ಷೆ ನಡೆಸಬೇಕು ಎಂದು ಸಲಹೆ ಮಾಡಿದರು.

**ಒಕ್ಕಲಿಗ ಸಮುದಾಯದ ವಿರೋಧದ ಬೆನ್ನಲ್ಲೇ ಲಿಂಗಾಯತ ಸಮಾಜದಿಂದಲೂ ವಿರೋಧ**



**ಕಾಂತರಾಜ್ ವರದಿ ಲೋಪಗಳಿಂದ ಕೂಡಿದೆ. ಲಿಂಗಾಯತ ಸಮುದಾಯದ ಸಂಖ್ಯೆ ಕಡಿಮೆ ತೋರಿಸಲಾಗಿದೆ. ಸರ್ಕಾರ ವರದಿಯನ್ನು ತಿರಸ್ಕರಿಸಬೇಕು ಎಂದು ಶಾಮನೂರು ಶಿವಶಂಕರಪ್ಪ ಒತ್ತಾಯಿಸಿದ್ದಾರೆ**

ಜಾತಿ ಗಣತಿ ವರದಿ ಈಗಾಗಲೇ 8 ವರ್ಷಗಳಷ್ಟು ಹಳೆಯದಾಗಿದ್ದು, ನ್ಯೂನತೆಗಳಿಂದ ಕೂಡಿದೆ. ನ್ಯೂನತೆಗಳಿರುವ ಕಾರಣ ಹೊಸದಾಗಿ ಹಾಗೂ ಆಧುನಿಕ ತಂತ್ರಜ್ಞಾನ ಬಳಸಿಕೊಂಡು ವೈಜ್ಞಾನಿಕವಾಗಿ ವರದಿ ಸಿದ್ಧಪಡಿಸಬೇಕು.

ಸಕಲ ಜಾತಿ, ಜನಾಂಗಗಳಿಗೆ ಲೇಸನ್ನೇ ಬಯಸುವ ಸಮಾಜ ವೀರಶೈವ-ಲಿಂಗಾಯತ ಸಮುದಾಯವಾಗಿದೆ. ಎಲ್ಲರ ಒಳಿತನ್ನು ಬಯಸುವುದು ಸಮುದಾಯದ ಗುರಿ ಎಂದಿದ್ದಾರೆ. ಜಾತಿ ಗಣತಿ ಸಮೀಕ್ಷೆಯನ್ನೇ ಸಮರ್ಪಕವಾಗಿ ನಡೆಸಿಲ್ಲ. ಹಲವರ ಮನೆಗಳಿಗೆ ಭೇಟಿ ನೀಡದೆ, ವರದಿ ಸಿದ್ಧಪಡಿಸಲಾಗಿದೆ ಎಂಬ ದೂರುಗಳಿವೆ.

ಸಮೀಕ್ಷೆಯಲ್ಲಿ ವೀರಶೈವ-ಲಿಂಗಾಯತ ಸಮುದಾಯ ಜನಸಂಖ್ಯೆಯನ್ನು ಕಡಿಮೆ ತೋರಿಸಲಾಗಿದೆ ಎಂಬ ಮಾಹಿತಿ ಇದೆ. ಇದರಿಂದ ಸಮಾಜಕ್ಕೆ ತೀವ್ರ ಸ್ವರೂಪದ ನಷ್ಟವಾಗಲಿದೆ ಎಂಬ ಅಭಿಪ್ರಾಯ ಸಭೆಯಲ್ಲಿ ವ್ಯಕ್ತವಾಗಿದೆ. ಸರ್ಕಾರ ಮತ್ತೊಮ್ಮೆ ಈ ಬಗ್ಗೆ ವಿವೇಚನಾಯುಕ್ತವಾಗಿ ಪರಾಮರ್ಶಿಸಿ ಮುಂದಿನ ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸುತ್ತೇವೆ ಎಂದರು.

ಈ ತಿಂಗಳ ಅಂತ್ಯದೊಳಗೆ ಸರ್ಕಾರಕ್ಕೆ ವರದಿ ತಲುಪಲಿದೆ ಎಂಬ ಬಗ್ಗೆ ಪ್ರತಿಕ್ರಿಯಿಸಿದ ಶಿವಶಂಕರಪ್ಪ, ಸರ್ಕಾರ ವರದಿ ಪಡೆಯಲಿ. ಆದರೆ, ಅದನ್ನು ಒಪ್ಪಬಾರದು, ಅದನ್ನು ತಿರಸ್ಕರಿಸಬೇಕು ಎಂದರು.

2015ರಲ್ಲಿ ಆಗಿನ ಸಿದ್ದರಾಮಯ್ಯ ಸರ್ಕಾರ ಹೆಚ್. ಕಾಂತರಾಜ್ ಅವರ ಅಧ್ಯಕ್ಷತೆಯಲ್ಲಿ 170 ಕೋಟಿ ರೂ. ವೆಚ್ಚದಲ್ಲಿ ಸಾಮಾಜಿಕ, ಆರ್ಥಿಕ ಹಾಗೂ ಶೈಕ್ಷಣಿಕ ಸಮೀಕ್ಷೆ ನಡೆಸಿತ್ತು. ಈ ಸಮೀಕ್ಷೆ ವರದಿಯನ್ನು ಇನ್ನೂ ಪ್ರಕಟಿಸಿಲ್ಲ.

ಬಿಹಾರ ಸರ್ಕಾರ ಇತ್ತೀಚೆಗೆ ಜಾತಿ ಗಣತಿ ವರದಿ ಪ್ರಕಟಿಸಿತ್ತು. ಈ ಹಿನ್ನೆಲೆಯಲ್ಲಿ ಸಿದ್ದರಾಮಯ್ಯ ಸರ್ಕಾರ ಸಹ ಜಾತಿ ಸಮೀಕ್ಷಾ ವರದಿ ಪ್ರಕಟಿಸಬೇಕೆಂಬ ಒತ್ತಾಯ ಹೆಚ್ಚಾಗಿದೆ. ಈ ತಿಂಗಳಲ್ಲೇ ಸರ್ಕಾರ ವರದಿ ಬಿಡುಗಡೆ ಮಾಡಲಿದೆ ಎಂದೂ ಹೇಳಲಾಗಿತ್ತು.

ಆದರೆ, ಮೊದಲು (4ನೇ ಪುಟಕ್ಕೆ)

## ತೆಹ್ರಿ ನಿಗಮದ ಜೊತೆ ವಿದ್ಯುತ್ ಯೋಜನೆಗೆ 15 ಸಾವಿರ ಕೋಟಿ ರೂ.ಒಪ್ಪಂದ

ಬೆಂಗಳೂರು, ನ. 9 – ಕರ್ನಾಟಕ ವಿದ್ಯುತ್ ನಿಗಮ ಹಾಗೂ ತೆಹ್ರಿ ಜಲ ವಿದ್ಯುತ್ ಅಭಿವೃದ್ಧಿ ನಿಗಮಗಳು 15 ಸಾವಿರ ಕೋಟಿ ರೂ.ಗಳ ವಿವಿಧ ವಿದ್ಯುತ್ ಯೋಜನೆಗಳಿಗಾಗಿ ಒಪ್ಪಂದ ಮಾಡಿಕೊಂಡಿವೆ.

ತೆಹ್ರಿ ನಿಗಮದ ಭೂಪೇಂದ್ರ ಗುಪ್ತ ಹಾಗೂ ಕರ್ನಾಟಕ ಇಂಧನ ಇಲಾಖೆಯ ಹೆಚ್ಚುವರಿ ಉಪ ಕಾರ್ಯದರ್ಶಿ ಗೌರವ್ ಗುಪ್ತ (4ನೇ ಪುಟಕ್ಕೆ)

## 24 ಜಿಲ್ಲೆಗಳಲ್ಲಿ ಕೃಷಿ ಭಾಗ್ಯ ಜಾರಿಗೆ ಸಂಪುಟದ ನಿರ್ಧಾರ

ಬೆಂಗಳೂರು, ನ. 9 - 'ಕೃಷಿ ಭಾಗ್ಯ' ಯೋಜನೆಯನ್ನು ಮತ್ತೆ ಜಾರಿ ಮಾಡಲು ಗುರುವಾರ ನಡೆದ ಸಚಿವ ಸಂಪುಟ ಸಭೆಯಲ್ಲಿ ನಿರ್ಧರಿಸಲಾಗಿದೆ. ಇದೇ ಸಾಲಿನಲ್ಲಿ 24 ಜಿಲ್ಲೆಗಳ 106 ತಾಲ್ಲೂಕುಗಳಲ್ಲಿ ಈ ಯೋಜನೆ ಅನುಷ್ಠಾನಗೊಳ್ಳಲಿದೆ.

ಸಂಪುಟ ಸಭೆಯ ನಂತರ ಕಾನೂನು ಸಚಿವ ಹೆಚ್.ಕೆ.ಪಾಟೀಲ್ ಅವರು ಈ ವಿಷಯ ತಿಳಿಸಿದ್ದು, ಮಳೆ ಆಧಾರಿತ ಕೃಷಿಯನ್ನು ಸುಸ್ಥಿರ (4ನೇ ಪುಟಕ್ಕೆ)

## ದಿವಾಳಿ ಸಂಹಿತೆ ಎತ್ತಿ ಹಿಡಿದ ಸುಪ್ರೀಂ ಕೋರ್ಟ್

ನವದೆಹಲಿ, ನ. 9 – ದಿವಾಳಿ ಸಂಹಿತೆಯ ಕೆಲ ಪ್ರಮುಖ ಅಂಶಗಳ ಸಿಂಧುತ್ವವನ್ನು ಸುಪ್ರೀಂ ಕೋರ್ಟ್ ಎತ್ತಿ ಹಿಡಿದಿದೆ. ದಿವಾಳಿ ಸಂಹಿತೆಯ ಕೆಲ ಅಂಶಗಳು ಸಮಾನತೆಯ ತತ್ವಗಳಿಗೆ ವಿರುದ್ಧವಾಗಿವೆ ಎಂದು ಸುಪ್ರೀಂ ಕೋರ್ಟ್‌ನಲ್ಲಿ ಅರ್ಜಿ ದಾಖಲಿಸಲಾಗಿತ್ತು. ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ಹಾಗೂ ನ್ಯಾಯಮೂರ್ತಿಗಳಾದ ಜೆ.ಬಿ. ಪರ್ಡಿವಾಲಾ ಹಾಗೂ ಮನೋಜ್ ಮಿಶ್ರ ಅವರನ್ನು ಒಳಗೊಂಡ ಪೀಠದ ಎದುರು ದಿವಾಳಿ ಸಂಹಿತೆ ಪ್ರಶ್ನಿಸಿ 391 ಅರ್ಜಿಗಳನ್ನು ದಾಖಲಿಸಲಾಗಿತ್ತು.

# ಶೋಷಣೆ ವಿರುದ್ಧ ಹೋರಾಟಕ್ಕೆ ಕಾನೂನು ಸಾಕ್ಷರತೆ

## ಕಾನೂನು ಸಾಕ್ಷರತಾ ಅರಿವು ಜಾಥಾಕ್ಕೆ ಚಾಲನೆ ನೀಡಿದ ನ್ಯಾ.ರಾಜೇಶ್ವರಿ ಎನ್.ಹೆಗಡೆ ಅಭಿಮತ





ದಾವಣಗೆರೆ, ನ.9- ರಾಷ್ಟ್ರೀಯ ಕಾನೂನು ಸೇವಾ ದಿನಾಚರಣೆಯ ಅಂಗವಾಗಿ ಕಾನೂನು ಸಾಕ್ಷರತಾ ಅರಿವು ಬೃಹತ್ ಜಾಥಾ ಕಾರ್ಯಕ್ರಮವನ್ನು ಗುರುವಾರ ನಗರದ ಸರ್ಕಾರಿ ಹೈಸ್ಕೂಲ್ ಮೈದಾನದಲ್ಲಿ ಹಮ್ಮಿಕೊಳ್ಳಲಾಗಿತ್ತು. ಸರ್ಕಾರಿ ಹೈಸ್ಕೂಲ್ ಮೈದಾನದಿಂದ ನಾಲ್ಕು ಭಾಗಗಳಾಗಿ ಜಾಥಾ ಪ್ರಾರಂಭವಾಗಿ ನಗರದಲ್ಲಿ ಪಥ ಸಂಚಲನ ಮಾಡಿತು.

ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಅಧ್ಯಕ್ಷರು ಹಾಗೂ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ ಶ್ರೀಮತಿ ರಾಜೇಶ್ವರಿ ಎನ್ ಹೆಗಡೆ ಅವರು ಹಸಿರು ನಿಶಾನೆ ತೋರಿಸುವ ಮೂಲಕ ಜಾಥಾಕ್ಕೆ ಚಾಲನೆ ನೀಡಿದರು.

ನಂತರ ಮಾತನಾಡಿದ ಅವರು, ಸಮಾಜದ ದುರ್ಬಲ ವರ್ಗದವರಿಗೆ, ಆರ್ಥಿಕವಾಗಿ ಹಿಂದುಳಿದವರಿಗೆ, ಮಹಿಳೆಯರಿಗೆ, ವಿಕಲಚೇತನರಿಗೆ ಕಾನೂನು ಅರಿವಿನ ಮೂಲಕ ಉಚಿತ ಕಾನೂನು ಸಹಾಯ ಬೆಂಬಲವನ್ನು ಒದಗಿಸುವುದು ಕಾನೂನು ಸೇವಾ ದಿನಾಚ ರಣೆಯ ಮುಖ್ಯ ಉದ್ದೇಶವಾಗಿದೆ ಎಂದರು. ಕಾನೂನು ಸೇವೆಗಳ ಪ್ರಾಧಿಕಾರದ ಕಾಯ್ದೆ ಯನ್ನು 9ನೇ ನವೆಂಬರ್ 1995ರಂದು ಜಾರಿಗೆ ತರಲಾಯಿತು. ಈ ಕಾಯ್ದೆಯ ಸ್ಮರಣಾರ್ಥವಾಗಿ ರಾಷ್ಟ್ರೀಯ ಕಾನೂನು ಸೇವೆಗಳ ದಿನವನ್ನು ಪ್ರತಿ ವರ್ಷ ನವೆಂಬರ್ 9 ರಂದು ಆಚರಿಸಲಾಗುತ್ತಿದೆ ಎಂದರು.

ಜನಸಾಮಾನ್ಯರು ಒಂದಲ್ಲಾ ಒಂದು ಕಾನೂನು ಸಮಸ್ಯೆ ಎದುರಿಸಬೇಕಾಗಿ ಬರುವುದು ಸಾಮಾನ್ಯವಾಗಿದೆ. ಇಂತಹ ಸಂದರ್ಭಗಳಲ್ಲಿ ಮುಗ್ಧರು, ದುರ್ಬಲರು ಸಮಾಜದ ಹಿಂದುಳಿದ ವರ್ಗಗಳಿಗೆ ಸೇರಿರುವ ಜನರು ಶೋಷಣೆಗೆ ಒಳಗಾಗಿರುವ ಸಾಧ್ಯತೆ ಹೆಚ್ಚು. ಕಾನೂನು ಸಾಕ್ಷರತೆಯು ಶೋಷಣೆಯ ವಿರುದ್ಧ ಹೋರಾಡಲು ಶಕ್ತರಾಗುವಂತೆ ಮಾಡಲು ಇರುವ ಅತ್ಯುತ್ತಮ ಸಾಧನವಾಗಿದೆ. ಕಾನೂನು ಸಾಕ್ಷರತೆಯಿಂದಾಗಿ ಜನ ಸಾಮಾನ್ಯರು ಸಂವಿಧಾನ ಹಾಗೂ ಇತರೆ ಶಾಸನಗಳು ತಮಗೆ ಕೊಡಮಾಡಿರುವ ಹಕ್ಕುಗಳನ್ನು ರಕ್ಷಿಸಿಕೊಳ್ಳಲು ಸಮರ್ಥರಾಗುತ್ತಾರೆ (4ನೇ ಪುಟಕ್ಕೆ)

## ಬಿಜೆಪಿ ಅವಧಿಯಲ್ಲಿ ಕಿಯೋನಿಕ್ಸ್‌ನಲ್ಲಿ 500 ಕೋಟಿ ರೂ. ಅವ್ಯವಹಾರ



ಬೆಂಗಳೂರು, ನ. 9 - ಹಿಂದಿನ ಬಿಜೆಪಿ ಸರ್ಕಾರದ ಅವಧಿಯಲ್ಲಿ ಕರ್ನಾಟಕ ಎಲೆಕ್ಟ್ರಾನಿಕ್ಸ್ ಡೆವಲಪ್‌ಮೆಂಟ್ ಕಾರ್ಪೊರೇಷನ್ ಲಿಮಿಟೆಡ್‌ನಲ್ಲಿ (ಕಿಯೋನಿಕ್ಸ್) ಸುಮಾರು 500 ಕೋಟಿ ರೂಪಾಯಿ ಅವ್ಯವಹಾರ ನಡೆದಿದೆ ಎಂದು ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವ ಪ್ರಿಯಾಂಕ್ ಖರ್ಗೆ ಅವರು ಆರೋಪಿಸಿದ್ದಾರೆ.

ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದ ನಂತರ ಕಿಯೋನಿಕ್ಸ್‌ನಿಂದ ಒಂದೇ ಒಂದು ಆದೇಶವನ್ನೂ ಹೊರಡಿಸಿಲ್ಲ. ಸಂಸ್ಥೆಯಿಂದ ಯಾವುದೇ ಖರೀದಿ ಪ್ರಕ್ರಿಯೆಯೂ ನಡೆದಿಲ್ಲ ಎಂದು ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಖರ್ಗೆ ತಿಳಿಸಿದ್ದಾರೆ.

2019-23ರ ನಡುವೆ 500 ಕೋಟಿ ರೂ.ಗಳ ಅವ್ಯವಹಾರ ನಡೆದಿದೆ ಎಂದು ಲೆಕ್ಕಪರಿಶೋಧನಾ ವರದಿಯಲ್ಲಿ ತಿಳಿಸಲಾಗಿದೆ. ಹಿಂದಿನ ಬಿಜೆಪಿ ಸರ್ಕಾರ ಕೇವಲ 40 ಪರ್ಸೆಂಟ್ ಸರ್ಕಾರವಲ್ಲ, 400 ಪರ್ಸೆಂಟ್ ಸರ್ಕಾರ ಎಂದವರು ಆರೋಪಿಸಿದರು. (2ನೇ ಪುಟಕ್ಕೆ)

## ಸರ್ಕಾರಿ ವೈದ್ಯ ಚುನಾವಣೆಯಲ್ಲಿ ಸ್ಪರ್ಧಿಸಲು ಅವಕಾಶ

**ಸೋತರೆ ಮತ್ತೆ ಕೆಲಸಕ್ಕೆ ಬರಲು ಹೈಕೋರ್ಟ್ ಅನುಮತಿ**

ಜೈಪುರ, ನ. 9 – ಸರ್ಕಾರಿ ವೈದ್ಯರೊಬ್ಬರು ರಾಜಸ್ಥಾನ ವಿಧಾನಸಭಾ ಚುನಾವಣೆಯಲ್ಲಿ ಸ್ಪರ್ಧಿಸಲು ಹಾಗೂ ಸೋತ ಸಂದರ್ಭದಲ್ಲಿ ಮತ್ತೆ ಕೆಲಸಕ್ಕೆ ಸೇರ್ಪಡೆಯಾಗಲು ರಾಜಸ್ಥಾನ ಹೈಕೋರ್ಟ್ ಅನುಮತಿ ನೀಡಿದೆ.

43 ವರ್ಷದ ದೀಪಕ್ ಘೋಘ್ರ ಅವರು ಭಾರತೀಯ ಟ್ರೈಬಲ್ ಪಾರ್ಟಿ (ಬಿ.ಟಿ.ಪಿ.) ಪಕ್ಷದ ಟಿಕೆಟ್ ಪಡೆದಿದ್ದು, ದುಂಗಾರ್ಪುರ ಕ್ಷೇತ್ರದಿಂದ ಸ್ಪರ್ಧಿಸುತ್ತಿದ್ದಾರೆ. ಅವರು ಬಿ.ಟಿ.ಪಿ. ಪಕ್ಷದ ರಾಜ್ಯಾಧ್ಯಕ್ಷ ವೇಲಾರಾಮ್ ಘೋಘ್ರ ಮಗ.

ದೀಪಕ್ ಘೋಘ್ರ ಅವರು ವಿಧಾನಸಭಾ ಚುನಾವಣೆಯಲ್ಲಿ ಪಾಲ್ಗೊಳ್ಳುವ ಸಲುವಾಗಿ ಅವರನ್ನು ವೈದ್ಯಕೀಯ ಅಧಿಕಾರಿ ಹುದ್ದೆಯಿಂದ ಬಿಡುಗಡೆ ಮಾಡಬೇಕು ಎಂದು ಹೈಕೋರ್ಟ್‌ನ ಜೋಧಪುರ ಪೀಠದ ಆದೇಶದಲ್ಲಿ ತಿಳಿಸಲಾಗಿದೆ. ಅರ್ಜಿದಾರ ಚುನಾವಣೆಯಲ್ಲಿ ಸೋತಲ್ಲಿ, ಅವರು ಮತ್ತೆ ವೈದ್ಯಕೀಯ ಅಧಿಕಾರಿ ಹುದ್ದೆಗೆ ಸೇರಲು (4ನೇ ಪುಟಕ್ಕೆ)

## ಶೇ.75 ಮೀಸಲಾತಿ ಹೆಚ್ಚಿಸಲು ಬಿಹಾರ ವಿಧಾನಸಭೆ ಒಪ್ಪಿಗೆ

ಪಾಟ್ನಾ, ನ. 9 – ಪರಿಶಿಷ್ಟರು ಹಾಗೂ ಹಿಂದುಳಿದ ವರ್ಗದವರ ಮೀಸಲಾತಿಯನ್ನು ಶೇ.65ಕ್ಕೆ ಹೆಚ್ಚಿಸುವ ಪ್ರಸ್ತಾಪಕ್ಕೆ ಬಿಹಾರ ವಿಧಾನಸಭೆ ಒಪ್ಪಿಗೆ ನೀಡಿದೆ. ಇದರ ಜೊತೆಗೆ ಶೇ.10ರ ಆರ್ಥಿಕವಾಗಿ ಹಿಂದುಳಿದವರ ಮೀಸಲಾತಿಯನ್ನೂ ನೀಡಲಾಗುವುದು. ಒಟ್ಟಾರೆ ಮೀಸಲಾತಿ ಪ್ರಮಾಣ ಶೇ.75ಕ್ಕೆ ತಲುಪಿದೆ. ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಅತಿ ಹಿಂದುಳಿದ ವರ್ಗ ಹಾಗೂ ಇತರೆ ಹಿಂದುಳಿದ ವರ್ಗದವರು ಪ್ರಸಕ್ತ ಶೇ.50ರಷ್ಟು ಮೀಸಲಾತಿ ಹೊಂದಿದ್ದಾರೆ. ಅದನ್ನು ಶೇ.65ಕ್ಕೆ ಹೆಚ್ಚಿಸಲು ನಿರ್ಧರಿಸಲಾಗಿದೆ.

## ಮೊಯಿತ್ರ ಉಚ್ಚಾಟನೆಗೆ ಸಮಿತಿ ಶಿಫಾರಸ್ಸು

**ಲೋಕಸಭೆಯಲ್ಲಿ ಪ್ರಶ್ನೆ ಕೇಳಲು ಲಂಚ ಪಡೆದ ಆರೋಪ**

ನವದೆಹಲಿ, ನ. 9 – ಲೋಕಸಭೆಯಲ್ಲಿ ಪ್ರಶ್ನೆ ಕೇಳಲು ಲಂಚ ಪಡೆದ ಆರೋಪ ಎದುರಿಸುತ್ತಿರುವ ತೃಣಮೂಲ ಕಾಂಗ್ರೆಸ್ ಸಂಸದೆ ಮೊಹುವಾ ಮೊಯಿತ್ರ ಅವರನ್ನು ಉಚ್ಚಾಟಿಸುವಂತೆ ಶಿಫಾರಸ್ಸು ಮಾಡಲು ಲೋಕಸಭೆಯ ನೈತಿಕ ಸಮಿತಿ ನಿರ್ಧರಿಸಿದೆ ಎಂದು ಮೂಲಗಳು ತಿಳಿಸಿವೆ.

ಸಂಸದರೊಬ್ಬರನ್ನು ಉಚ್ಚಾಟಿಸಲು ನೈತಿಕ ಸಮಿತಿ ಶಿಫಾರಸ್ಸು ಮಾಡುತ್ತಿರುವುದು ಇದೇ ಮೊದಲ ಬಾರಿ ಎಂದು ಲೋಕಸಭಾ ಕಾರ್ಯಾಲಯದ ನಿವೃತ್ತ ಅಧಿಕಾರಿಯೊಬ್ಬರು ಹೇಳಿದ್ದಾರೆ. ಬಿಜೆಪಿ ಸಂಸದ ವಿನೋದ್ ಕುಮಾರ್ ಸೊಂಕರ್ ಅವರ ನೇತೃತ್ವದ ಸಮಿತಿ ಗುರುವಾರ ಸಭೆ ನಡೆಸಿ, ಮೊಯಿತ್ರ ಉಚ್ಚಾ ಟನೆಗೆ ಶಿಫಾರಸ್ಸು ಮಾಡುವ ನಿರ್ಧಾರ ತೆಗೆದುಕೊಂಡಿದೆ.

ಸಭೆಯ ನಂತರ ಮಾತನಾಡಿರುವ ಸೊಂಕರ್, ಸಮಿತಿಯ ಆರು ಸದಸ್ಯರು ವರದಿಯ ನಿರ್ಣಯವನ್ನು ಬೆಂಬಲಿಸಿದ್ದಾರೆ ಹಾಗೂ ನಾಲ್ವರು (4ನೇ ಪುಟಕ್ಕೆ)




ಹೃದಯಪೂರ್ವಕ ಅಭಿನಂದನೆಗಳು

ಪ್ರತಿಷ್ಠಿತ 2023 ನೇ ಸಾಲಿನ 'ಮಹಾತ್ಮ ಗಾಂಧಿ ಸದ್ಭಾವನಾ ಅಂತರರಾಷ್ಟ್ರೀಯ ಪ್ರಶಸ್ತಿ'ಗೆ ಭಾಜನರಾಗಿ
ಸನ್ಮಾನ್ಯ ರಾಜ್ಯಪಾಲರಾದ ಶ್ರೀ ಥಾವರ್ ಚಂದ್ ಗೆಹ್ಲೋಟ್ ಅವರಿಂದ ಪ್ರಶಸ್ತಿಯನ್ನು ಸ್ವೀಕರಿಸಿದ,
ಲಯನ್ಸ್ ಜಿಲ್ಲೆ 317-ಸಿ ಯೋಗ ಮತ್ತು ರಕ್ತದಾನದ ಜಿಲ್ಲಾ ಸಂಯೋಜಕರೂ, ಸಿನಿಮಾ ಸಿರಿ,
ಕರ್ನಾಟಕ ರಕ್ಷಣಾ ವೇದಿಕೆ, ದೈವಜ್ಞ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ,
ಆರ್ಟ್ ಆಫ್ ಲಿವಿಂಗ್ ಮುಂತಾದ ಸಂಘ-ಸಂಸ್ಥೆಗಳಲ್ಲಿ ಕ್ರಿಯಾಶೀಲರಾಗಿರುವ
ನಮ್ಮ ಜಿಲ್ಲಾ ಒಕ್ಕೂಟದ ಅಧ್ಯಕ್ಷರಾದ

ಶ್ರೀ ವಾಸುದೇವ ರಾಯ್ಕರ್

ಅವರಿಗೆ ಹೃದಯಪೂರ್ವಕ ಅಭಿನಂದನೆಗಳು.

ದಾವಣಗೆರೆ ಜಿಲ್ಲಾ ಯೋಗ ಒಕ್ಕೂಟ (ರಿ.), ದಾವಣಗೆರೆ.

# ಭರಮಸಾಗರ ಕೆರೆ ವೀಕ್ಷಣೆಗೆ ನಾಳೆ ಸಿರಿಗೆರೆ ಶ್ರೀಗಳು



ಭರಮಸಾಗರ, ನ.9- ಏತ ನೀರಾವರಿ ಯೋಜನೆ ವ್ಯಾಪ್ತಿಗೆ ಸೇರಿದ 25 ಕೆರೆಗಳಿಗೆ ಸಿರಿಗೆರೆ ತರಳಬಾಳು ಮಠದ ಶ್ರೀ ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ ಮೂರು ದಿನಗಳ ಕಾಲ ಭೇಟಿ ನೀಡಿ ವೀಕ್ಷಿಸುವರು.

ನಾಳೆ ದಿನಾಂಕ 10ರಂದು ಕಾತ್ರಾಳು, ಸಾದರಹಳ್ಳಿ, ಚಿಕ್ಕಪುರ, ಕೊಡಗವಳ್ಳಿ, ವಡ್ಡರ ಸಿದ್ದವ್ವನಹಳ್ಳಿ, ಲಕ್ಷ್ಮಿಸಾಗರ, ಚಿಕ್ಕಬೆನ್ನೂರು, ಚಿಕ್ಕಬೆನ್ನೂರು ಗೋಮಾಳ, ಕೊಳಹಾಳು ಜಿನುಗು, ಕೊಳಹಾಳು ಗೊಲ್ಲರಹಟ್ಟಿ ಮತ್ತು ಕೊಳಹಾಳು ಕೆರೆಗಳ ವೀಕ್ಷಣೆ ನಡೆಸುವರು.

ದಿನಾಂಕ 11 ರಂದು ಭರಮಸಾಗರ ಚಿಕ್ಕಕೆರೆ, ಬೇವಿನಹಳ್ಳಿ, ನಂದಿಹಳ್ಳಿ, ಪಂಜಯ್ಯನ ಹಟ್ಟಿ, ಯಮ್ಮನಗಟ್ಟ, ಬಹದ್ದೂರ್ ಘಟ್ಟ, ಕೊಗುಂಡೆ, ಕಾಕಬಾಳು, ಕಾಲ್ಗೆರೆ, ಆಜಾದ್ ನಗರ, ಇಸಾಮುದ್ರ ಕೆರೆಗಳ ವೀಕ್ಷಿಸುವರು.

ದಿನಾಂಕ 12ರಂದು ಮುದ್ದಾಪುರ, ಯಳಗೋಡು, ಹಲ್ಲೇಹಾಳು, ಹಲ್ಲೇಹಾಳು ಗೊಲ್ಲರಹಟ್ಟಿ, ಅಡವಿಗೊಲ್ಲರಹಟ್ಟಿ, ನಲ್ಲಿಕಟ್ಟೆ ಕೆರೆಗಳಿಗೆ ಭೇಟಿ ನೀಡುವರು.

ಭರಮಸಾಗರ ಏತ ನೀರಾವರಿ ಯೋಜನೆಯನ್ನು ರೂ. 525 ಕೋಟಿ ವೆಚ್ಚದಲ್ಲಿ ಕೈಗೊಂಡಿದ್ದು 56 ಕಿ.ಮೀ. ದೂರದವರೆಗೂ ಪೈಪುಗಳನ್ನು ಹಾಕಿ ಪೂರ್ಣಗೊಳಿಸಿರುವ ರಾಜ್ಯದ ಮೊದಲ ಯೋಜನೆ ಎಂದು ಹೆಸರಾಗಿದೆ. ಶ್ರೀ ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿಯವರ ಕಣ್ಗಾವಲಿನಲ್ಲಿ ಆರಂಭವಾದ ಈ ಯೋಜನೆಯು ಒಂದು ವರ್ಷದ ಅವಧಿಯಲ್ಲಿ ಪೂರ್ಣಗೊಂಡು 2022ರ ಸೆ. 29 ರಂದು ಮೊದಲ ಬಾರಿಗೆ ತುಂಗಭದ್ರಾ ನದಿಯಿಂದ ಭರಮಸಾಗರ ಕೆರೆಗೆ ಪೈಪುಗಳ ಮೂಲಕ ನೀರು ಹರಿದು ಬಂದಿತ್ತು.

ಶ್ರೀ ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ ಸರ್ಕಾರದೊಂದಿಗೆ ನಿರಂತರ ಸಂಪರ್ಕ ಸಾಧಿಸಿ, ಯೋಜನೆ ಜಾರಿಗೊಳ್ಳುವಂತೆ ಮಾಡಿದರು. ತುಂಗಭದ್ರಾ ನದಿಯಿಂದ ಭರಮಸಾಗರ ಕೆರೆಗೆ ನೀರು ಬಂದು ಶೇಖರಣೆಗೊಂಡಂತೆ ವ್ಯಾಪ್ತಿಯ 42 ಕೆರೆಗಳಿಗೂ ನೀರು ಹರಿಸಲಾಗಿದೆ.

ಮೊದಲ ಹಂತದಲ್ಲಿ ಮೂರು ದಿನಗಳ ಕಾಲ ಶ್ರೀಗಳು ಹಲವು ಕೆರೆಗಳಿಗೆ ಭೇಟಿ ನೀಡಿ ನೀರು ಮತ್ತು ಕೆರೆಯ ಕುಂದುಕೊರತೆಗಳನ್ನು ವೀಕ್ಷಿಸುವರು. ಕರ್ನಾಟಕ ನೀರಾವರಿ ನಿಗಮದ ಇಂಜಿನಿಯರ್‌ಗಳು ಕಾಮಗಾರಿ ನಿರ್ವಹಿಸಿದ ಎಸ್‌ಎಸ್‌ಸಿ ಕಂಪನಿ ಅಧಿಕಾರಿಗಳು ಸಹ ಮೂರು ದಿನಗಳ ಭೇಟಿ ಕಾರ್ಯದಲ್ಲಿ ಭಾಗವಹಿಸುವರು. ಯೋಜನೆಯ ವ್ಯಾಪ್ತಿಯಲ್ಲಿ ಕೆಲವು ಕೆರೆಗಳಿಗೆ ನೀರು ಸರಾಗವಾಗಿ ಬರುತ್ತಿದ್ದು ಇನ್ನೂ ಕೆಲವು ಕೆರೆಗಳಿಗೆ ನೀರಿನ ಹರಿವಿನ ಪ್ರಮಾಣ ಕಡಿಮೆ ಇದೆ. ಕೆಲವು ಕೆರೆಗಳಿಗೆ ನೀರು ಬರುತ್ತಿಲ್ಲವೆಂಬ ದೂರುಗಳಿದ್ದು, ಈ ಬಗ್ಗೆ ಜನರು ಶ್ರೀಗಳಿಗೆ ತಿಳಿಸುವರು.

# ಉಚಿತ ಅಕ್ಕಿ ವಿತರಣೆಯಿಂದ ರೈತರಿಗೆ ಅನುಕೂಲಕ್ಕಿಂತ ಅನಾನುಕೂಲ ಹೆಚ್ಚು

ದಾವಣಗೆರೆ, ನ. 9- ಸರ್ಕಾರದ ಉಚಿತ ಅಕ್ಕಿ ವಿತರಣೆಯಿಂದ ರೈತರಿಗೆ ಅನುಕೂಲಕ್ಕಿಂತ ಅನಾನುಕೂಲವೇ ಹೆಚ್ಚಾಗಿದೆ. ಅಕ್ಕಿ ವಿತರಣೆಯಿಂದ ಸರ್ಕಾರಕ್ಕೆ 9000 ಕೋಟಿ ರೂ. ವೆಚ್ಚವಾಗಲಿದೆ. ಇದರ ಬದಲಿಗೆ ಐದು ಕೆಜಿ ಅಕ್ಕಿ ಅಥವಾ ಜೋಳ, ಒಂದು ಕೆಜಿ ತೊಗರಿಬೇಳೆ, ಒಂದು ಕೆಜಿ ಕಡಲೇಕಾಯಿ ಎಣ್ಣೆ ವಿತರಣೆ ಮಾಡುವುದರಿಂದ ಕೇವಲ 6800 ಕೋಟಿ ರೂ. ವೆಚ್ಚ ಅಗಲಿದೆ ಎಂದು ಕರ್ನಾಟಕ ರಾಜ್ಯ ರೈತ ಸಂಘದ ರಾಜ್ಯಾಧ್ಯಕ್ಷ ಚಾಮರಸ ಮಾಲಿ ಪಾಟೀಲ್ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಪ್ರತಿ ಕುಟುಂಬಕ್ಕೆ ಪ್ರೋಟೀನ್ ಸೇರಿದಂತೆ ಇತರೆ ಪೌಷ್ಠಿಕಾಂಶಗಳು ದೊರಕುತ್ತವೆ. ಅಲ್ಲದೇ ರೈತರಿಗೆ ನಕಾರಾತ್ಮಕ ಅನುಕೂಲ ಆಗಲಿದೆ ಎಂದು ಹೇಳಿದರು.

ರಾಜ್ಯದಲ್ಲಿನ 4.42 ಕೋಟಿ ಜನರಿಗೆ ಐದು ಕೆಜಿ ಅಕ್ಕಿಯ ಜಾಗದಲ್ಲಿ ನೀಡುತ್ತಿರುವ ಒಟ್ಟು 9020 ಕೋಟಿ ಹಣದಲ್ಲಿ ರಾಜ್ಯದ ಕೃಷಿ ಕ್ಷೇತ್ರದಲ್ಲಿ ಹಲವಾರು ಮಹತ್ವದ ಮಾದರಿ ಕ್ರಮಗಳನ್ನು ಕೈಗೊಳ್ಳಬಹುದಾಗಿದೆ ಎಂದರು.

ಒರಿಸ್ಸಾ ರಾಜ್ಯದಲ್ಲಿರುವಂತೆ ಸಿರಿಧಾನ್ಯಗಳ ಪುನಶ್ಚೇತನಕ್ಕೆ ಅಭಿಯಾನ ಕೈಗೊಳ್ಳಬೇಕು. ಸಾಂಪ್ರದಾಯಿಕ ಬೀಜ ವೈವಿಧ್ಯತೆಯ ಪುನಶ್ಚೇತನ ಸಂರಕ್ಷಣೆ ಮತ್ತು ವಿತರಣೆ ಸೇರಿದಂತೆ ಕರ್ನಾಟಕದ 20 ಬೀಜ ಸಂರಕ್ಷಕರಿಗೆ ಪ್ರೋತ್ಸಾಹ ಕೊಡುವ ಮೂಲಕ ಪುನಶ್ಚೇತನಕ್ಕೆ ಸಹಕಾರ ನೀಡಬೇಕೆಂದು ಮನವಿ ಮಾಡಿದರು.

ರೈತರ ಉತ್ಪನ್ನಗಳನ್ನು ನೇರವಾಗಿ ತಲುಪಿಸುವ ಸಾವಯವ ಮಾರುಕಟ್ಟೆಗಳ ವ್ಯವಸ್ಥೆ ಮಾಡಬೇಕಾಗಿದೆ. ಇದಲ್ಲದೆ ಎಫ್‌ಪಿಓಗಳಿಗೆ ಬಡ್ಡಿ ಪಾವತಿಸಲು ಬೆಂಬಲ ಮತ್ತು ಸಾಲದ ಖಾತರಿ ನಿಧಿ ತೆಗೆದಿರಿಸಬೇಕು ಎಂದರು.

ಇದಲ್ಲದೆ ರೈತರ ಆತ್ಮಹತ್ಯೆಯಿಂದ ಸಂಕಷ್ಟಕ್ಕೀಡಾದ ಮಹಿಳಾ ರೈತರಿಗೆ ನೆರವು ಸೇರಿದಂತೆ ಸಾಲದ ನಿವಾರಣೆ ಜೊತೆಗೆ ಸಾಲ ಪಾವತಿಸಬೇಕು ಎಂದು ಹೇಳಿದರು.

ಪಡಿತರ ಚೀಟಿ ಆಧಾರದಲ್ಲಿ ಫ್ರೂಟ್ ಪೋರ್ಟಲ್‌ನಲ್ಲಿ ಮಹಿಳಾ ರೈತರ ನೋಂದಣಿ ಮಾಡಬೇಕು. ಅವರಿಗೆ ತರಬೇತಿ ನೀಡುವ ಮೂಲಕ ಆದ್ಯತಾ ವಲಯದ ಸಾಲ ನೀಡಿಕೆಗೆ ಮುಂದಾಗಬೇಕು. ಅ. 15 ರಿಂದ ಮಹಿಳಾ ರೈತರ ದಿನವೆಂದು ಘೋಷಿಸಬೇಕು ಎಂದು ಒತ್ತಾಯಿಸಿದರು.

ಕನಿಷ್ಠ ಬೆಂಬಲ ಬೆಲೆಯನ್ನು ಕರ್ನಾಟಕದಲ್ಲಿ ಕಾಯ್ದೆಯನ್ನಾಗಿ ರೂಪಿಸಿ, ಆ ಮೂಲಕ ರೈತ ಹೋರಾಟದ ಮಹತ್ವದ ಒತ್ತಾಯವನ್ನು ಜಾರಿಗೆ ತಂದ ಮೊದಲ ರಾಜ್ಯ ಎಂಬ ಗರಿಮೆ ಪಡೆದುಕೊಳ್ಳಬಹುದು ಎಂದರು.

ಇದಲ್ಲದೇ ರಾಜ್ಯ ಸರ್ಕಾರ ರೈತರಿಗೆ ಮಾರಕವಾದ ಎಪಿಎಂಸಿ ಕಾಯ್ದೆ ತಿದ್ದುಪಡಿ, ಭೂ ಸುಧಾರಣಾ ಕಾಯ್ದೆ ಹಾಗೂ ಜಾನುವಾರು ಹತ್ಯೆ ಕಾಯ್ದೆಗಳನ್ನು ವಾಪಾಸ್ ಪಡೆಯಬೇಕು. ಈ ಕುರಿತು ಇದೇ 16 ರಂದು ಸಿಎಂ ಸಭೆ ಕರೆದಿದ್ದು, ವಾಪಾಸ್ ಪಡೆಯುವ ಸೂಕ್ತ ನಿರ್ಧಾರ ಕೈಗೊಳ್ಳಬೇಕು. ಇಲ್ಲವಾದರೆ ರಾಜ್ಯಾದ್ಯಂತ ಜನಾಂದೋಲನ ರೂಪಿಸಿ, ಉಗ್ರ ಹೋರಾಟ ನಡೆಸಲಾಗುವುದು ಎಂದು ಎಚ್ಚರಿಸಿದರು.

ಪತ್ರಿಕಾಗೋಷ್ಠಿಯಲ್ಲಿ ರೈತ ಸಂಘದ ಪದಾಧಿಕಾರಿಗಳಾದ ಅರುಣ್ ಕುಮಾರ್ ಕುರುಡಿ, ಬುಳ್ಳಾಪುರದ ಹನುಮಂತಪ್ಪ, ಕೊಗ್ಗನೂರು ಹನುಮಂತಪ್ಪ, ಮಂಜುಳಾ ಅಕ್ಕಿ, ರೇವಣಸಿದ್ಧಪ್ಪ, ಅಣಬೇರು ಹನುಮಂತಪ್ಪ, ಜಯಣ್ಣ, ಸಿದ್ಧಪ್ಪ, ರವಿಕಿರಣ್, ನಾಗೇಂದ್ರಪ್ಪ ಮತ್ತಿತರರಿದ್ದರು.

# ಮಲೇಬೆನ್ನೂರು : ವಾಲ್ಮೀಕಿ ಜಾತ್ರಾ ಸಮಿತಿ ಅಧ್ಯಕ್ಷರಾಗಿ ಸಹಕಾರ ಸಚಿವ ರಾಜಣ್ಣ



ಮಲೇಬೆನ್ನೂರು, ನ.9- ರಾಜನಹಳ್ಳಿಯ ವಾಲ್ಮೀಕಿ ಗುರುಪೀಠದಲ್ಲಿ 2024 ರ ಫೆ. 8 ಮತ್ತು 9 ರಂದು ಜರುಗಲಿರುವ 6 ನೇ ವರ್ಷದ ವಾಲ್ಮೀಕಿ ಜಾತ್ರಾ ಸಮಿತಿಯ ಅಧ್ಯಕ್ಷರನ್ನಾಗಿ ಸಹಕಾರ ಸಚಿವ ಕೆ. ಎನ್. ರಾಜಣ್ಣ ಅವರನ್ನು ಗುರುವಾರ ಸರ್ವಾನುಮತದಿಂದ ಆಯ್ಕೆ ಮಾಡಲಾಯಿತು. ಬೆಂಗಳೂರಿನ ವಿಕಾಸ ಸೌಧದಲ್ಲಿ ಶ್ರೀ ವಾಲ್ಮೀಕಿ ಪ್ರಸನ್ನಾನಂದ ಮಹಾಸ್ವಾಮೀಜಿ ಅವರ ಸಾನ್ನಿಧ್ಯದಲ್ಲಿ ನಡೆದ ಸಭೆಯಲ್ಲಿ ಈ ಆಯ್ಕೆ ನಡೆಯಿತು.

ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ, ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ ಸಚಿವ ಬಿ.ನಾಗೇಂದ್ರ, ಸಂಡೂರು ಶಾಸಕ ಈ ತುಕಾರಾಂ, ಚಳ್ಳಕೆರೆ ಶಾಸಕ ಟಿ. ರಘುಮೂರ್ತಿ, ಸುರಪುರ ಶಾಸಕ ರಾಜಾ ವೆಂಕಟಪ್ಪ ನಾಯಕ, ರಾಯಚೂರು ಗ್ರಾಮೀಣ ಶಾಸಕ ಬಸವನಗೌಡ ದದ್ದಲ್, ಮಾನ್ವಿ ಶಾಸಕ ಹಂಪಯ್ಯ ಸಾಹುಕಾರ್, ಜಗಳೂರು ಶಾಸಕ ಬಿ.ದೇವೇಂದ್ರಪ್ಪ, ಮಸ್ಕಿ ಶಾಸಕ ಬಸವನಗೌಡ ತುರವಿಹಾಳ್, ಕೂಡ್ಲಿಗಿ ಶಾಸಕ ಡಾ. ಎನ್.ಟಿ. ಶ್ರೀನಿವಾಸ್, ದೇವವರ್ಗ ಶಾಸಕರಾದ ಶ್ರೀಮತಿ ಕರೆಮ್ಮ ಜಿ.ನಾಯಕ ಇವರುಗಳು ಸಭೆಯಲ್ಲಿ ಹಾಜರಿದ್ದು ಜಾತ್ರೆಯ ಯಶಸ್ಸಿಗೆ ಅಗತ್ಯ ಸಲಹೆ ಸಹಕಾರ ನೀಡಿದರು.

ಶ್ರೀಮಠದ ಧರ್ಮದರ್ಶಿಗಳಾದ ಜಿ. ರಂಗಯ್ಯ, ಹರ್ತಿಕೋಟೆ ವೀರೇಂದ್ರ ಸಿಂಹ, ರಾಮಣ್ಣ ಕಲ್ಲಣ್ಣನವರ್, ಮಾಲೂರು ವೆಂಕಟರಮಣ, ನಿವೃತ್ತ ಅಧಿಕಾರಿ ಕೆ. ಎಸ್. ಮೃತ್ಯುಂಜಯ, ಮಹಾಸಭಾ ರಾಜ್ಯಾಧ್ಯಕ್ಷ ಜಿ.ಟಿ. ಚಂದ್ರಶೇಖರಪ್ಪ, ಟಿ.ಈಶ್ವರ್, ಹೊದಿಗೆರೆ ರಮೇಶ್, ಕೆ.ಪಿ. ಪಾಲಯ್ಯ ಮತ್ತಿತರರು ಸಭೆಯಲ್ಲಿ ಉಪಸ್ಥಿತರಿದ್ದರು.

# ನಗರದಲ್ಲಿ ಇಂದು ಧನ್ವಂತರಿ ಜಯಂತಿ

ಜಿಲ್ಲೆಯ ಪಾರಂಪರಿಕ ವೈದ್ಯ ಪರಿಷತ್ತಿನಿಂದ ಇಂದು ಬೆಳಿಗ್ಗೆ 10-30ಕ್ಕೆ ಹದಡಿ ರಸ್ತೆಯಲ್ಲಿರುವ ಕಿಸಾನ್ ವರ್ಲ್ಡ್ ವ್ಯವಹಾರ ಮಳಿಗೆಯ ಒಳಗಿನ ಸೆಮಿನಾರ್ ಹಾಲ್‌ನಲ್ಲಿ (ಹಳೆಯ ವಾಣಿ ರೈಸ್ ಮಿಲ್ ಮುಂಭಾಗ ದಲ್ಲಿ) ಶ್ರೀ ಧನ್ವಂತರಿ ಜಯಂತಿ ನಡೆಸಲಾಗುವುದು. ಪೂಜೆಯ ನಂತರ ಧನ್ವಂತರಿ ಜಯಂತಿಯ ಅಂಗವಾಗಿ ಹೆಬ್ಬಾಳಿನ ವಿರಕ್ತಮಠದ ಶ್ರೀ ಮಹಾಂತ ರುದ್ರೇಶ್ವರ ಸ್ವಾಮಿಗಳವರ ಸಾನ್ನಿಧ್ಯದಲ್ಲಿ ಸಾರ್ವಜನಿಕ ಸಮಾರಂಭ ನಡೆಯಲಿದೆ.

ಅತಿಥಿಗಳಾಗಿ ಮಾಜಿ ಮಹಾಪೌರ ಎಸ್.ಟಿ. ವೀರೇಶ್, ಚಿತ್ರದುರ್ಗ ಜಿಲ್ಲೆಯ ಪಾರಂಪರಿಕ ವೈದ್ಯ ಪರಿಷತ್ತಿನ ಸಂಚಾಲಕ ವೈದ್ಯ ವೀರಣ್ಣ ಆಗಮಿಸುವರು. ಕರ್ನಾಟಕ ಪಾರಂಪರಿಕ ವೈದ್ಯ ಪರಿಷತ್ತಿನ ನಿಕಟಪೂರ್ವ ಅಧ್ಯಕ್ಷ ನೇರ್ಲಿಗೆ ಗುರುಸಿದ್ದಪ್ಪ, ಬಿ.ಎಂ. ಶಿವಮೂರ್ತಿ ಹಾಗೂ ತಾಲ್ಲೂಕು ಘಟಕದ ಅಧ್ಯಕ್ಷ ಶಿವಲಿಂಗಮ್ಮ ಉಪಸ್ಥಿತರಿರುವರು.

ಈ ಸಂದರ್ಭದಲ್ಲಿ ರಕ್ತ ಹೀನತೆಗೆ ಉಚಿತವಾಗಿ ಔಷಧಿಯನ್ನು ನೀಡಲಾಗುವುದು. ಧನ್ವಂತರಿ ಪೂಜೆಯಲ್ಲಿ ಪಾಲ್ಗೊಂಡು ಸದುಪಯೋಗ ಪಡೆದುಕೊಳ್ಳಬೇಕೆಂದು ಪಾರಂಪರಿಕ ವೈದ್ಯ ಪರಿಷತ್ತಿನ ತಾಲ್ಲೂಕು ಘಟಕದ ಕಾರ್ಯದರ್ಶಿ ಮಮತಾ ನಾಗರಾಜ್ ತಿಳಿಸಿದ್ದಾರೆ.

# ಆಧಾರ್ ಕಾರ್ಡ್ ತಿದ್ದುಪಡಿಗೆ ನಕಲಿ ಸಹಿ : ಓರ್ವನ ಬಂಧನ

ದಾವಣಗೆರೆ, ನ.9- ಆಧಾರ್ ಕಾರ್ಡ್ ತಿದ್ದುಪಡಿ ಅಥವಾ ನವೀಕರಣ ಅರ್ಜಿಗೆ ಪತ್ರಾಂಕಿತ ಅಧಿಕಾರಿಯಂತೆ ಸೀಲು ಹಾಗೂ ಸಹಿ ನಕಲು ಮಾಡುತ್ತಿದ್ದ ಆರೋಪಿಯನ್ನು ಪೊಲೀಸರು ಬಂಧಿಸಿದ್ದಾರೆ.

ಪುಟಗನಾಳ್ ಗ್ರಾಮದ ಬಸವರಾಜಪ್ಪ (70) ಬಂಧಿತ ಆರೋಪಿ. ಈತನಿಂದ ಕೃತ್ಯಕ್ಕೆ ಉಪಯೋಗಿಸಿದ ನಕಲಿ ಪರಿಕರಗಳನ್ನು ವಶಪಡಿಸಿಕೊಳ್ಳಲಾಗಿದೆ. ನಗರದ ಪ್ರಧಾನ ಅಂಚೆ ಕಚೇರಿ ಮುಂಭಾಗ ಆಧಾರ್ ತಿದ್ದುಪಡಿ ಅರ್ಜಿ ನಮೂನೆಯಲ್ಲಿ ಪತ್ರಾಂಕಿತ ಅಧಿಕಾರಿಯ ದೃಢೀಕರಣ ಮಾಡುವಾಗ ಪತ್ರಾಂಕಿತ ಅಧಿಕಾರಿಯ ಸಹಿ ಮತ್ತು ಸೀಲು ಹಾಕುವ ಸ್ಥಳದಲ್ಲಿ ನಾನು ಸೃಷ್ಟಿಸಿಕೊಂಡ 'ಹಿರಿಯ ತಜ್ಞರು. ಸಿ.ಜಿ.ಹೆಚ್. ದಾವಣಗೆರೆ' ಎಂದು ನಕಲು ಸೀಲನ್ನು ಹಾಕಿ ನಾನೇ ಪತ್ರಾಂಕಿತ ಅಧಿಕಾರಿ ಎಂದು ಹಸಿರು ಶಾಯಿಯಿಂದ ನಕಲು ಸಹಿ ಮಾಡಿರುತ್ತೇನೆ ಎಂದು ಆರೋಪಿ ವಿಚಾರಣೆ ವೇಳೆ ತಿಳಿಸಿದ್ದಾನೆ.

ನ.7ರಂದು ಮುಖ್ಯ ಅಂಚೆ ಪಾಲಕ ಸದ್ಯೋಜಾತಪ್ಪ ಅವರು ಕರ್ತವ್ಯದಲ್ಲಿದ್ದಾಗ ಆರೋಪಿ ನಕಲು ಸಹಿ ಮಾಡಿವುದು ಕಂಡು ಬಂದಿದ್ದು, ಕಾನೂನು ಕ್ರಮ ಜರುಗಿಸುವಂತೆ ದೂರು ದಾಖಲಿಸಿದ್ದರು.

ಬಸವನಗರ ಪೊಲೀಸ್ ಠಾಣೆಯ ಪೊಲೀಸ್ ನಿರೀಕ್ಷಕ ಹೆಚ್ ಗುರುಬಸವರಾಜ್ ನೇತೃತ್ವದಲ್ಲಿ ಪಿಎಸ್‌ಐ ಜಿ. ನಾಗರಾಜ್, ಎಎಸ್‌ಐ ಶಿವಪ್ಪ ಜಿ. ಆರ್, ಮಹಮದ್ ರಫಿ, ಗಿರೀಶ್ ಬಿ.ಪಿ, ಶ್ರೀಮತಿ ಕವಿತಾ, ಅಣ್ಣಯ್ಯ ಲಮಾಣಿ, ಅಮರೇಶ್ ಸಂಗಮ್ ಆರೋಪಿ ಪತ್ತೆ ಕಾರ್ಯದಲ್ಲಿ ಭಾಗಿಯಾಗಿದ್ದರು.

# ಹರಪನಹಳ್ಳಿ ಎಡಿಬಿ ಪ್ರಥಮ ದರ್ಜೆ ಕಾಲೇಜಿಗೆ ನ್ಯಾಕ್ ಬಿ+ ಮಾನ್ಯತೆ



ಹರಪನಹಳ್ಳಿ, ನ.9- ವೀರಶೈವ ವಿದ್ಯಾವರ್ಧಕ ಸಂಘದ ಆಡಳಿತಕ್ಕೊಳಪಟ್ಟ ಹರಪನಹಳ್ಳಿಯ ಎ.ಡಿ.ಬಿ.ಪ್ರಥಮ ದರ್ಜೆ ಕಾಲೇಜಿಗೆ ನ್ಯಾಕ್ ಸಮಿತಿ ಭೇಟಿ ನೀಡಿ ಪರಿಶೀಲನೆ ನಡೆಸಿತು. ಇದರಿಂದ ಎ.ಡಿ.ಬಿ ಮಹಾವಿದ್ಯಾಲಯಕ್ಕೆ ಬಿ ಪ್ಲಸ್ ಮಾನ್ಯತೆ ಲಭಿಸಿದೆ. ಉತ್ತರಾ ಖಂಡ ರಾಜ್ಯದ ಸೂರಜ್ಮಲ್ ವಿಶ್ವವಿದ್ಯಾಲಯದ ನಿವೃತ್ತ ಪ್ರಾಧ್ಯಾಪಕಿ ಡಾ.ರೇಣು ಜತನ್, ಮಹಾರಾಷ್ಟ್ರದ ಶಿವಾಜಿ ಆರ್ಟ್ಸ್ ಮತ್ತು ಸೈನ್ಸ್ ಕಾಲೇಜಿನ ಪ್ರಾಚಾರ್ಯ ಡಾ.ಸ್ಮಿತ ದೇಶಮುಖ್ ಈ ಸಮಿತಿಯಲ್ಲಿದ್ದು ಪರಿಶೀಲನೆ ನಡೆಸಿದ್ದರು. ಕಾಲೇಜಿನ ಸಾಧನೆಗೆ ಬಳ್ಳಾರಿಯ ವೀರಶೈವ ವಿದ್ಯಾವರ್ಧಕ ಸಂಘದ ಪದಾಧಿಕಾರಿಗಳು, ಕಾಲೇಜಿನ ಆಡಳಿತ ಮಂಡಳಿ ಅಧ್ಯಕ್ಷ ಕೋರಿ ವಿರೂಪಾಕ್ಷಪ್ಪ, ಕಾಲೇಜು ಆಡಳಿತ ಮಂಡಳಿಯ ಅಮೃತ ಮಂಜುನಾಥ, ಪಿ.ಜಿ ದೊಡ್ಡಬಸಪ್ಪ, ಕಾಲೇಜು ಪ್ರಾಂಶುಪಾಲ ಡಾ.ಎಸ್.ಎಂ.ಸಿದ್ದಲಿಂಗಮೂರ್ತಿ, ಐ.ಕ್ಯೂ.ಎ.ಸಿ ಎಚ್.ಆಶಾ ಸೇರಿದಂತೆ ಇತರರು ಅಭಿನಂದಿಸಿದ್ದಾರೆ.

# ಕಿಯೋನಿಕ್ಸ್‌ನಲ್ಲಿ ಅವ್ಯವಹಾರ

**(1ನೇ ಪುಟದಿಂದ)** 300 ಕೋಟಿ ರೂ.ಗಳ ಬಿಲ್ ಪಾಸ್ ಮಾಡುವ ಸಲುವಾಗಿ ಕಿಯೋನಿಕ್ಸ್ ಅಧಿಕಾರಿಯೊಬ್ಬರು 38 ಕೋಟಿ ರೂ. ಲಂಚ ಕೇಳಿದ್ದಾರೆ. ಇದರಲ್ಲಿ ಖರ್ಗೆ ಭಾಗಿಯಾಗಿದ್ದಾರೆ ಎಂದು ಬಿಜೆಪಿ ನಾಯಕರು ಆರೋಪಿಸಿದ್ದರು.

# ನಂದಿತಾವರೆ ಕೃಷಿ ಪತ್ತಿನ ಸಂಘದ ಅಧ್ಯಕ್ಷರಾಗಿ ಹೇಮಾವತಿ



ಮಲೇಬೆನ್ನೂರು, ನ. 9 - ನಂದಿತಾವರೆ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ನೂತನ ಅಧ್ಯಕ್ಷರಾಗಿ ಎನ್. ಪಿ. ಹೇಮಾವತಿ ವಿಜಯಕುಮಾರ್ ಮತ್ತು ಉಪಾಧ್ಯಕ್ಷರಾಗಿ ಪಿ.ಎಸ್. ದೇವೇಂದ್ರಪ್ಪ ಗುರುವಾರ ಜರುಗಿದ ಚುನಾವಣೆಯಲ್ಲಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಈ ಸಂಘದಲ್ಲಿ ಇದೇ ಮೊದಲ ಬಾರಿಗೆ ಮಹಿಳಾ ಅಧ್ಯಕ್ಷರು ಆಯ್ಕೆಯಾಗಿದ್ದಾರೆ. ಸಹಕಾರ ಅಭಿವೃದ್ಧಿ ಅಧಿಕಾರಿ ಸುನೀತಾ ಅವರು ಚುನಾವಣಾಧಿಕಾರಿಯಾಗಿ ಕಾರ್ಯ ನಿರ್ವಹಿಸಿದರು ಸಂಘದ ನಿರ್ದೇಶಕ ಎಂ.ಬಿ. ಶಿವಮೂರ್ತಯ್ಯ, ವೈ. ಸುರೇಶ್, ಎಸ್.ಬಿ. ಪಾಟೀಲ್, ಎನ್.ಕೆ. ನಾಗರಾಜ್, ಕೆ.ಜಿ. ಬಸವರಾಜ್, ಭೋವಿ ರಾಮಪ್ಪ, ಟಿ.ಎಸ್. ಬಸವರಾಜ್, ಎಂ. ಸತ್ಯನಾರಾಯಣ ಮತ್ತು ಗ್ರಾಮದ ಮುಖಂಡರಾದ ಎನ್.ಪಿ. ಬಸವಲಿಂಗಪ್ಪ, ಎಂ.ಬಿ. ಮುರುಗೇಂದ್ರಯ್ಯ, ಕೆ.ಜಿ. ಕುಬೇರಗೌಡ, ಕೆ.ಜಿ. ಭರಮಗೌಡ ಹಾಗೂ ಸಂಘದ ಸಿಇಓ ಬಸಮ್ಮ ಈ ವೇಳೆ ಹಾಜರಿದ್ದರು.

# ಅಣಬೂರಿನಲ್ಲಿಂದು ಆರೋಗ್ಯ ಶಿಬಿರ

ದಾವಣಗೆರೆ: ಪ್ರೀತಿ ಆರೈಕೆ ಟ್ರಸ್ಟ್ ಮತ್ತು ಆರೈಕೆ ಆಸ್ಪತ್ರೆಯ ಸಂಯುಕ್ತಾಶ್ರದಲ್ಲಿ ದಾವಣಗೆರೆ ಜಿಲ್ಲಾದ್ಯಂತ ನಡೆಯುತ್ತಿರುವ ಪ್ರೀತಿ ಆರೈಕೆ ಆರೋಗ್ಯ ಉಚಿತ ಶಿಬಿರವು ಜಗಳೂರು ತಾ. ಅಣಬೂರಿನಲ್ಲಿ ಇಂದು ಬೆಳಿಗ್ಗೆ 9 ಕ್ಕೆ ಗ್ರಾಮದ ಶ್ರೀ ವೀರಭದ್ರೇಶ್ವರ ದೇವಸ್ಥಾನದಲ್ಲಿ ಆರಂಭವಾಗಲಿದೆ. ಶಿಬಿರವನ್ನು ಶಾಸಕ ಬಿ. ದೇವೇಂದ್ರಪ್ಪ ಅವರು ಉದ್ಘಾಟಿಸಲಿದ್ದು, ಗ್ರಾ.ಪಂ ಅಧ್ಯಕ್ಷ ಸಿದ್ಧಪ್ಪ ಅವರು ಅಧ್ಯಕ್ಷತೆ ವಹಿಸುವರು.

# 2ಎ ಮೀಸಲಾತಿಗೆ ಒಗ್ಗಟ್ಟಿನಿಂದ ಹೋರಾಟ ನಡೆಸಬೇಕು



**ಜಯಮೃತ್ಯುಂಜಯ ಶ್ರೀ**

ನ್ಯಾಮತಿ, ನ.9- ನಮ್ಮ ಸಮುದಾಯದ ಮಕ್ಕಳಿಗೆ ಶಿಕ್ಷಣ, ಉದ್ಯೋಗ ಹಾಗೂ ಮುಂದಿನ ಭವಿಷ್ಯಕ್ಕಾಗಿ 2ಎ ಮೀಸಲಾತಿ ಪಡೆಯಲು ನಾವು ಒಗ್ಗಟ್ಟಿನಿಂದ ಹೋರಾಟ ನಡೆಸಬೇಕು ಎಂದು ಕೂಡಲಸಂಗಮ ಪಂಚಮಸಾಲಿ ಪೀಠದ ಶ್ರೀ ಜಯಮೃತ್ಯುಂಜಯ ಸ್ವಾಮೀಜಿ ಹೇಳಿದರು.

ಅವರು ನ್ಯಾಮತಿ ಪಟ್ಟಣದ ಶ್ರೀ ಬನಶಂಕರಿ ದೇವಿ ಸಮುದಾಯ ಭವನದಲ್ಲಿ ಬುಧವಾರ ರಾತ್ರಿ ಏರ್ಪಡಿಸಿದ್ದ ಪಂಚಮಸಾಲಿ ಮೀಸಲು ಹೋರಾಟದ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದರು.

ನಮಗೆ 2ಎ ಮೀಸಲಾತಿ ನೀಡಿದರೆ ಮಾತ್ರ ನಾವು ಸಂತೃಪ್ತಿ. ಅದು ಲೋಕಸಭೆ ಚುನಾವಣೆಯೊಳಗೆ ಘೋಷಣೆ ಮಾಡಿದ್ರೆ ಸರಿ. ಅಂದಾಗ ಮಾತ್ರ ನಿಮ್ಮ ಮೇಲೆ ನಮ್ಮ ಸಮುದಾಯದ ವಿಶ್ವಾಸ ಮೂಡಲು ಸಾಧ್ಯ. ವಿಶ್ವಾಸ ಉಳಿಸಿಕೊಳ್ಳಬೇಕಾದರೆ, ಮುಖ್ಯಮಂತ್ರಿಗಳು ಮೀಸಲಾತಿ ಘೋಷಣೆಗೆ ಮುನ್ನುಡಿ ಬರೆಯಬೇಕು. ಹಾಲುಮತ ಸಮುದಾಯದವರಿಗೆ, ಎಸ್ಟಿ ಮೀಸಲಾತಿಗೆ ಶಿಫಾರಸ್ಸು ಮಾಡಿ ಅಳಿದುಳಿದ ಸ್ಥಳಗಳಿಗೆ ಪಂಚಮಸಾಲಿಗಳಿಗೆ ನೀಡಿ, ಅಲ್ಲದೇ ಅದೇ ರೀತಿ ಲಿಂಗಾಯತರಿಗೂ ಸೆಂಟ್ರಲ್ ಒಬಿಸಿ ಶಿಫಾರಸ್ಸು ಮಾಡಿ. ಇದಕ್ಕೇನು ಕಾನೂನು ತೊಡಕುಗಳಿಲ್ಲ. ಶಿಫಾರಸ್ಸು ಮಾಡುವುದಷ್ಟೇ ಮಾಡಿ, ನಮ್ಮ ಪಂಚಮಸಾಲಿ ಸಮುದಾಯಕ್ಕೆ 2ಎ ಮೀಸಲಾತಿ ಕೊಡಿ ಎಂದು ಸರ್ಕಾರಕ್ಕೆ ಜಯಮೃತ್ಯುಂಜಯ ಶ್ರೀಗಳ ಆಗ್ರಹಿಸಿದ್ದಾರೆ.

ದಾವಣಗೆರೆ ನಗರ ಪಾಲಿಕೆ ಮಾಜಿ ಮೇಯರ್ ಜೆ.ಅಜಯ್‌ಕುಮಾರ್ ಮಾತನಾಡಿ, ಕೂಡಲಸಂಗಮ ಶ್ರೀಗಳು 2ಎ ಮೀಸಲಾತಿಗೆ ರಾಜ್ಯಾದ್ಯಂತ ಪ್ರವಾಸ ಕೈಗೊಂಡು ಹಳ್ಳಿ ಹಳ್ಳಿಗೂ ಭೇಟಿ ನೀಡಿ ಸಮುದಾಯಕ್ಕೆ ಈ ಹೋರಾಟಕ್ಕೆ ಬೆಂಬಲ ನೀಡಬೇಕೆಂದರು.

ಹರಿಹರದ ಮಾಜಿ ಶಾಸಕ ಎಚ್.ಎಸ್. ಶಿವಶಂಕರ್ ಮಾತನಾಡಿ ಸುಮಾರು 13 ವರ್ಷಗಳಿಂದ ರಾಜ್ಯದ ಉದ್ದಗಲಕ್ಕೂ ಸಂಚಾರ ಮಾಡುವ ಮೂಲಕ ಸಮಾಜಕ್ಕೆ 2ಎ ಮೀಸಲಾತಿ ಕೊಡಿಸಬೇಕೆಂದು ಶ್ರೀಗಳು ಹೋರಾಟ ನಡೆಸುತ್ತಿದ್ದಾರೆ. ಯಾರು ಸಮಾಜವನ್ನು ಕಟ್ಟುವ ಪ್ರಯತ್ನ ಮಾಡುತ್ತಾರೋ ಅಂತವರಿಗೆ ಬೆಂಬಲ ನೀಡಿ, ನೀವೆಲ್ಲ ಗುಂಪುಗಾರಿಕೆ ಬಿಟ್ಟು ಸಹಕರಿಸುವ ಮೂಲಕ ಈ ಹೋರಾಟಕ್ಕೆ ತಾವೆಲ್ಲ ಬರಬೇಕೆಂದು ಹೇಳಿದರು.

ಪಂಚಮಸಾಲಿ ಜಿಲ್ಲಾಧ್ಯಕ್ಷ ಅಶೋಕ್, ಈಶ್ವರಪ್ಪ, ಜಿಲ್ಲಾ ಗೌರವಾಧ್ಯಕ್ಷ ಪಂಚಾಕ್ಷರಪ್ಪ, ನ್ಯಾಮತಿ ತಾಲ್ಲೂಕು ಅಧ್ಯಕ್ಷ ಪೂಜಾರ್ ಚಂದ್ರಶೇಖರ್, ಪ್ರಭಾ ನುಚ್ಚಿನ, ವನಜಾಕ್ಷಮ್ಮ, ನಾಗರತ್ನ, ಹಾಲೇಶ್, ಮಂಜುನಾಥ, ನುಚ್ಚಿನ ವಾಗೀಶ್, ಹಲಗೇರಿ ವೀರೇಶ್, ರವಿ, ಕುಂಬಾರ ಸಮಾಜದ ಕುಂಬಾರ ಮಲ್ಲಿಕಾರ್ಜುನ ಹೊಸಮನೆ ಸೇರಿದಂತೆ ಇತರರು ಇದ್ದರು.

ನ್ಯಾಮತಿ ತಾಲ್ಲೂಕಿನ ಬಸವನಹಳ್ಳಿ, ಮಾದನಬಾವಿ, ಕುರುವ, ಒಡೆಯರಹತ್ತೂರು, ದೊಡ್ಡೆತ್ತಿನಹಳ್ಳಿ, ಹೊನ್ನಾಳಿ ತಾಲ್ಲೂಕಿನ ಮಾರಿಕೊಪ್ಪ, ಹೊಳೆಹರಳಹಳ್ಳಿ, ಕೋಟೆಮಲ್ಲೂರು ಗ್ರಾಮಗಳಿಗೆ ಪಂಚಮಸಾಲಿ ಪೀಠದ ಶ್ರೀ ಜಯಮೃತ್ಯುಂಜಯ ಸ್ವಾಮೀಜಿಯವರು ಭೇಟಿ ನೀಡಿ, ನವೆಂಬರ್ 10 ರ ಶುಕ್ರವಾರ ದಾವಣಗೆರೆ ನಗರದ ಹೊರವಲಯದಲ್ಲಿರುವ ವಿಶ್ವಾರಾಧ್ಯ ಕ್ಯಾನ್ಸರ್ ಆಸ್ಪತ್ರೆಯ ಮುಂಭಾಗದಲ್ಲಿ ನಡೆಯುವ ರಾಷ್ಟ್ರೀಯ ಹೆದ್ದಾರಿಯನ್ನು ಬಂದು ಮಾಡಿ ಇಷ್ಟಲಿಂಗ ಪೂಜೆಯೊಂದಿಗೆ ರಸ್ತೆ ತಡೆ ಹೋರಾಟದಲ್ಲಿ ಭಾಗವಹಿಸಲು ಕರೆ ನೀಡಿದರು.

# ಡಿಡಿಎಲ್‌ಆರ್ ಕಚೇರಿ ಸೂಪರ್ ವೈಸರ್ ಲೋಕಾಯುಕ್ತರ ಬಲೆಗೆ

ದಾವಣಗೆರೆ, ನ.9- ಜಮೀನಿನ ಚೆಕ್ ಬಂದಿ ಮತ್ತು ಪೋಡು ನಂಬರ್ ಅದಲು ಬದಲಾಗಿದ್ದನ್ನು ಸರಿಪಡಿಸಲು ಅರ್ಜಿ ಸಲ್ಲಿಸಿದವರಿಂದ ಲಂಚ ಪಡೆಯುತ್ತಿದ್ದ ಡಿಡಿಎಲ್‌ಆರ್ ಕಚೇರಿಯ ಸೂಪರ್ ವೈಸರ್ ಲೋಕಾಯುಕ್ತ ಬಲೆಗೆ ಬಿದ್ದಿದ್ದಾನೆ.

ಇಲ್ಲಿನ ಜಿಲ್ಲಾಡಳಿತ ಭವನದಲ್ಲಿನ ಭೂ ಮಾಪನ ಇಲಾಖೆಯ ಉಪ ನಿರ್ದೇಶಕರ ಕಚೇರಿಯ ಸೂಪರ್ ವೈಸರ್ ಕೇಶವಮೂರ್ತಿ ಲೋಕಾಯುಕ್ತಕ್ಕೆ ಬಿದ್ದ ನೌಕರ.

ಈತ ಪಿ.ಜಿ.ಮುನಿಯಪ್ಪ ತಮ್ಮ ಸೊಸೆಯ ತಾಯಿ ಕೆ.ಎಸ್.ಮೀನಾಕ್ಷಮ್ಮ ಅವರಿಗೆ ಸೇರಿದ ಜಗಳೂರು ತಾಲ್ಲೂಕು ಪಲ್ಲಾಗಟ್ಟೆ ಗ್ರಾಮದ ರಿ.ಸ.ನಂ.65-7ರಲ್ಲಿ 12 ಗುಂಟೆ ಜಮೀನಿನ ಚೆಕ್ ಬಂದಿ ಮತ್ತು ಪೋಡು ನಂಬರ್ ಅದಲು, ಬದಲಾಗಿರುವುದನ್ನು ಸರಿಪಡಿಸಿಕೊಡಲು ಅರ್ಜಿ ಸಲ್ಲಿಸಿದ್ದರು.

ಇದನ್ನು ಮಾಡಿಕೊಡಲು ಕೇಶವಮೂರ್ತಿ 40 ಸಾವಿರ ರೂ.ಗಳಿಗೆ ಬೇಡಿಕೆ ಇಟ್ಟಿದ್ದ. ಕೊನೆಗೆ 30 ಸಾವಿರ ರೂ. ಗೆ ಕೆಲಸ ಮಾಡಿಕೊಡಲು ಒಪ್ಪಿಕೊಂಡಿದ್ದ. ಈ ಬಗ್ಗೆ ಪಿ.ಜಿ.ಮುನಿಯಪ್ಪ ಲೋಕಾಯುಕ್ತ ಪೊಲೀಸ್ ಠಾಣೆಯಲ್ಲಿ ದೂರು ನೀಡಿದ್ದರು.

ಪ್ರಕರಣ ದಾಖಲಿಸಿಕೊಂಡ ಲೋಕಾಯುಕ್ತ ಪೊಲೀಸರು ಮುನಿಯುಪ್ಪನಿಂದ ಕೇಶವಮೂರ್ತಿ 30 ಸಾವಿರ ರೂ. ಲಂಚದ ಹಣದ ಪೈಕಿ 5 ಸಾವಿರ ಮುಂಗಡ ಪಡೆಯುತ್ತಿದ್ದ ವೇಳೆ ಸಿಕ್ಕಿ ಬಿದ್ದಿದ್ದಾನೆ.

ಲೋಕಾಯುಕ್ತ ಎಸ್ಪಿ ಎಂ.ಎಸ್.ಕೌಲಾಪೂರೆ ಮಾರ್ಗದರ್ಶನದಲ್ಲಿ ಪೊಲೀಸ್ ನಿರೀಕ್ಷಕರಾದ ಎಚ್. ಎಸ್.ರಾಷ್ಟ್ರಪತಿ, ಸಿ.ಮಧುಸೂದನ್, ಪ್ರಭು ಬ. ಸೂರಿನ ಹಾಗೂ ಸಿಬ್ಬಂದಿಯಾದ ವೀರೇಶಯ್ಯ, ಮಲ್ಲಿಕಾರ್ಜುನ, ಧನರಾಜ, ಗಿರೀಶ, ಕೋಟಿನಾಯ್ಕ, ಕೃಷ್ಣನಾಯ್ಕ, ಬಸವರಾಜರನ್ನು ಒಳಗೊಂಡ ತಂಡವು ದಾಳಿ ಮಾಡಿತ್ತು.

# ನಗರದಲ್ಲಿ ಉಚಿತ ಆರೋಗ್ಯ ತಪಾಸಣೆ

ಕನ್ನಡ ರಾಜ್ಯೋತ್ಸವದ ಅಂಗವಾಗಿ ನಗರದ ಹದಡಿ ರಸ್ತೆಯಲ್ಲಿರುವ ಸಿಟಿ ಸೆಂಟ್ರಲ್ ಆಸ್ಪತ್ರೆಯಲ್ಲಿ ಇಂದು ಬೆಳಿಗ್ಗೆ 9-30ರಿಂದ 2 ಗಂಟೆಯವರೆಗೆ ಸಾಮಾನ್ಯ ಕಾಯಿಲೆಗಳಿಗೆ ಹಾಗೂ ಕೀಲು- ಮೂಳೆ, ಮಂಡಿ ಚಿಪ್ಪು ನೋವುಗಳಿಗೆ ಸಂಬಂಧಿಸಿದಂತೆ ಉಚಿತ ಆರೋಗ್ಯ ತಪಾಸಣಾ ಶಿಬಿರವನ್ನು ಹಮ್ಮಿಕೊಳ್ಳಲಾಗಿದೆ. ಉಚಿತ ಸಮಾಲೋಚನೆ ಜೊತೆಗೆ ರಕ್ತದೊತ್ತಡ ಮತ್ತು ಸಕ್ಕರ ಪರೀಕ್ಷೆ ಮಾಡಲಾಗುವುದು.

ಹೆಚ್ಚಿನ ಮಾಹಿತಿಗೆ ಸಂಪರ್ಕಿಸಿ: 6366530930, 6361568414.

# ಮೆಳ್ಳೇಕಟ್ಟೆ ಕೆ.ವಿ. ಹೇಮಂತರಾಜ್ ನಿಧನ



ದಾವಣಗೆರೆ ತಾಲ್ಲೂಕು ಮೆಳ್ಳೇಕಟ್ಟೆ ಗ್ರಾಮದ ವಾಸಿ ದಿ|| ಬಿ.ಎಂ. ವಿರೂಪಾಕ್ಷಪ್ಪನವರ ಮಗ **ಶ್ರೀ ಕೆ.ವಿ. ಹೇಮಂತರಾಜ್** ಅವರು ದಿನಾಂಕ 09.11.2023ರ ಗುರುವಾರ ಮಧ್ಯಾಹ್ನ 3.45ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ ಸುಮಾರು 56 ವರ್ಷ ವಯಸ್ಸಾಗಿತ್ತು.

ಪತ್ನಿ, ಓರ್ವ ಪುತ್ರ, ಓರ್ವ ಪುತ್ರಿ ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 10.11.2023ರ ಶುಕ್ರವಾರ ಬೆಳಿಗ್ಗೆ 11 ಗಂಟೆಗೆ ಮೆಳ್ಳೇಕಟ್ಟೆ ಗ್ರಾಮದ ಮೃತರ ಜಮೀನಿನಲ್ಲಿ ನೆರವೇರಿಸಲಾಗುವುದು.

**ದುಃಖತಪ್ತ ಕುಟುಂಬ ವರ್ಗ**
**ಮೊ. 96630 24050**

## ಮಾನ್ಯ ಗೌರವಾನ್ವಿತ ಹಿರಿಯ ಸಿವಿಲ್ ನ್ಯಾಯಾಧೀಶರವರ ನ್ಯಾಯಾಲಯ ದಾವಣಗೆರೆ

**ಪಿ. ಅಂಡ್.ಎಸ್.ಸಿ.12/2023**

ಅರ್ಜಿದಾರರು : 1) **ಶ್ರೀಮತಿ ಅಂಜಿನಮ್ಮ ಗಂಡ ಲೇಟ್ ದಂಡಿಗಪ್ಪ**, ವಯಸ್ಸು 49 ವರ್ಷ. 2) **ಪ್ರಿಯಾಂಕ ಎ.ಡಿ. ಕೋಂ ಲೇಟ್ ದಂಡಿಗಪ್ಪ**, ವಯಸ್ಸು 31 ವರ್ಷ. 3) **ಪ್ರತಿಭಾ ಡಿ. ಕೋ ಲೇಟ್ ದಂಡಿಗಪ್ಪ**, ವಯಸ್ಸು 23 ವರ್ಷ. 4) **ಪೂಜಾ ಡಿ. ಕೋಂ ಲೇಟ್ ದಂಡಿಗಪ್ಪ** ವಯಸ್ಸು 21 ವರ್ಷ. ಇವರೆಲ್ಲರ ವಿಳಾಸವು ಮನೆ ನಂ, 3/1160, 5ನೇ ತಿರುವು, ಗಾಂಧಿನಗರ ದಾವಣಗೆರೆ. **ವಿರುದ್ಧ**

ಎದುರದಾರರು : ಇಲ್ಲ,

**ಹಿಂದೂ ಉತ್ತರಾಧಿಕಾರಿ ಅಧಿನಿಯಮ ಕಲಂ 372 ಮತ್ತು ಸಿವಿಲ್ ಪ್ರಕ್ರಿಯಾ ಸಂಹಿತೆ ಕಲಂ 151ರ ಅಡಿಯಲ್ಲಿ ನೀಡಲಾದ ಪ್ರಕಟಣಾ ನೋಟೀಸು**

ಅರ್ಜಿದಾರರ ಮಗ **ಶ್ರೀ ಬಿ. ಪ್ರವೀಣ ಬಿನ್ ದಂಡಿಗಪ್ಪ** ಇವರು ಮೊದಲ ಅರ್ಜಿದಾರರ ಮಗನಾಗಿದ್ದು ಇವರು ದ್ವಿತಿಯ ದರ್ಜೆ ಸಹಾಯಕರಾಗಿ ಕೆಲಸ ಮಾಡಿರುತ್ತಾರೆ. 21.11.2023 ರಂದು ಬೆಳಿಗ್ಗೆ 9.30ಕ್ಕೆ ಕೆಲಸಕ್ಕೆ ಹೋಗಿ ವಾಪಾಸ್ಸು ಬಂದಿರುವುದಿಲ್ಲ. ಗೌರವಾನ್ವಿತ ಪ್ರಧಾನ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಅಸಲು ದಾವ ನಂ. 256/2021 ರಲ್ಲಿ ಸಿವಿಲ್ ಡೆತ್ ಎಂದು ಆದೇಶವಾಗಿರುತ್ತದೆ.

ಈ ಕಾರಣ ಮೇಲ್ಕಂಡ ಪ್ರಕರಣದಲ್ಲಿನ ಅರ್ಜಿದಾರರು ಈ ನ್ಯಾಯಾಲಯದಲ್ಲಿ ಉತ್ತರಾಧಿಕಾರಿ ಕಾಯ್ದೆಯ ಕಲಂ 372 ರ ಪ್ರಕಾರ ಪ್ರಕರಣವನ್ನು ದಾಖಲಿಸಿದ್ದು, 4ನೇ ಅರ್ಜಿದಾರರಾದ ಪೂಜಾ ಡಿ.ಕೆ. ಬಿನ್ ಲೇಟ್ ದಂಡಿಗಪ್ಪ, ಇವರನ್ನು ಮೃತ ಡಿ. ಪ್ರವೀಣ್ ನವರ ಉತ್ತರಾಧಿಕಾರಿಯೆಂದು ಘೋಷಣೆ ಮಾಡಲು ಅರ್ಜಿಯನ್ನು ದಾಖಲಿಸಿರುವುದರಿಂದ ಈ ಅರ್ಜಿಗೆ ಯಾರಾದರು ತಕರಾರು ಸಲ್ಲಿಸುವವರು ಇದ್ದಲ್ಲಿ, ದಿನಾಂಕ : 07.12.2023 ಬೆಳಿಗ್ಗೆ 11 ಗಂಟೆಗೆ ಮೇಲ್ಕಂಡ ನ್ಯಾಯಾಲಯಕ್ಕೆ ಹಾಜರಾಗಿ ನೇರವಾಗಿಯಾಗಲೀ ಅಥವಾ ನಿಮ್ಮ ವಕೀಲರ ಮೂಲಕವಾಗಲೀ ತಕರಾರು ಸಲ್ಲಿಸುವುದು. ಇಲ್ಲವಾದಲ್ಲಿ ಅರ್ಜಿಯನ್ನು ಯಾರದೂ ತಕರಾರು ಇಲ್ಲವೆಂದು ಏಕಪಕ್ಷೀಯ ತೀರ್ಮಾನ ತೆಗೆದುಕೊಳ್ಳಲಾಗುವುದು ತಿಳಿಯಿರಿ. ನ್ಯಾಯಾಲಯದ ಮೊಹರು ಹಾಗೂ ಸಹಿಯೊಂದಿಗೆ ದಿನಾಂಕ : 25.10.2023 ರಂದು ಕೊಡಲ್ಪಟ್ಟಿದೆ.

ಅರ್ಜಿದಾರರ ಪರ ವಕೀಲರು
**(ರೇಣುಕ ಪ್ರಸಾದ್)**
**(ಗುರು ಬಸವರಾಜ್ ಎನ್)**
ವಕೀಲರು
ಸ್ಥಳ : ದಾವಣಗೆರೆ

ನ್ಯಾಯಾಲಯದ ಆದೇಶದ ಮೇರೆಗೆ
ಮುಖ್ಯ ಆಡಳಿತಾಧಿಕಾರಿ
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರ
ನ್ಯಾಯಾಲಯ ದಾವಣಗೆರೆ.

## ಮಾನ್ಯ ಗೌರವಾನ್ವಿತ ಸಿವಿಲ್ ನ್ಯಾಯಾಧೀಶರವರ ನ್ಯಾಯಾಲಯ ಹರಪನಹಳ್ಳಿ

**ಅಸಲು ದಾವಾ ಸಂಖ್ಯೆ : 50 / 2013**

**ವಾದಿ :** ಶ್ರೀಮತಿ ವಸೂರಮ್ಮ **ವಿರುದ್ಧ**

**ಪ್ರತಿವಾದಿಗಳು :** ಶ್ರೀಮತಿ ವಡ್ರ ಜಯಮ್ಮ ಮತ್ತು ಇತರರು.

**ಪತ್ರಿಕಾ ಪ್ರಕಟಣೆ**

ಈ ಮೂಲಕ **ಪ್ರತಿವಾದಿ ನಂ. 1(ಬಿ)** : ಶ್ರೀಮತಿ ವಡ್ರ ರೇಣುಕಮ್ಮ ತಂದೆ ಲೇಟ್ ದಾಸಪ್ಪ, ವಯಸ್ಸು 40 ವರ್ಷ, **ಪ್ರತಿವಾದಿ ನಂ. 1 (ಡಿ)** : ಶ್ರೀಮತಿ ವಡ್ರ ಗಿರಿಜಮ್ಮ ತಂದೆ ಲೇಟ್ ದಾಸಪ್ಪ, ವಯಸ್ಸು 36 ವರ್ಷ, **ಪ್ರತಿವಾದಿ ನಂ. 1 (ಇ)** : ಶ್ರೀಮತಿ ವಡ್ರ ಮಂಜಮ್ಮ ತಂದೆ ಲೇಟ್ ದಾಸಪ್ಪ, ವಯಸ್ಸು 34 ವರ್ಷ, **ಪ್ರತಿವಾದಿ ನಂ. 1 (ಎಫ್)** ಶ್ರೀಮತಿ ವಡ್ರ ಆಶಮ್ಮ ತಂದೆ ಲೇಟ್ ದಾಸಪ್ಪ, ವಯಸ್ಸು 32 ವರ್ಷ, ಎಲ್ಲರೂ ವಾಸ : ಕರೇಮ್ಮನಹಳ್ಳಿ ಗ್ರಾಮ, ಜಗಳೂರು ತಾಲ್ಲೂಕು, ದಾವಣಗೆರೆ ಜಿಲ್ಲೆ, ಆದ ನಿಮ್ಮ ವಿರುದ್ಧ ವಾದಿಯಾದ ಶ್ರೀಮತಿ ವಡ್ರ ವಸೂರಮ್ಮ ಇವರು ಹರಪನಹಳ್ಳಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯದಲ್ಲಿ ಹಕ್ಕು ಘೋಷಣೆ ಹಾಗೂ ಶಾಶ್ವತ ನಿರ್ಬಂಧಕಾಜ್ಞೆ ಕೋರಿ ಈ ಮೇಲ್ಕಂಡ ದಾವೆಯನ್ನು ಸಲ್ಲಿಸಿದ್ದು ಸದರಿ ದಾವೆಗೆ ಸಂಬಂಧಿಸಿದಂತೆ ದಾವಾ ಸಮನ್ಸ್‌ಗಳನ್ನು ಸಾಮಾನ್ಯ ಸ್ವರೂಪದಲ್ಲಿ ಹಾಗೂ ನೋಂದಾಯಿತ ಅಂಚೆಯ ಮೂಲಕ ನಿಮಗೆ ಕಳುಹಿಸಿದರೂ ಸಹ ಅವು ಜಾರಿಯಾಗದ ಕಾರಣ ಈ ಪತ್ರಿಕಾ ಪ್ರಕಟಣೆಯನ್ನು ಹೊರಡಿಸಲಾಗುತ್ತದೆ. ಈ ದಾವೆಯು ದಿನಾಂಕ 13.12.2023ರಂದು ಬೆಳಿಗ್ಗೆ 11.00 ಗಂಟೆಗೆ ಮುದ್ಧತ್ತು ಇರುತ್ತದೆ. ಕಾರಣ ತಾವುಗಳು ಖುದ್ದಾಗಿ ಅಥವಾ ವಕೀಲರ ಮೂಲಕ ನ್ಯಾಯಾಲಯಕ್ಕೆ ಹಾಜರಾಗತಕ್ಕದ್ದು.

ಒಂದು ವೇಳೆ ಈ ಮೇಲೆ ತಿಳಿಸಿದ ದಿನದಂದು ನ್ಯಾಯಾಲಯಕ್ಕೆ ಹಾಜರಾಗಲು ನೀವು ತಪ್ಪಿದ್ದಲ್ಲಿ ನಿಮ್ಮ ಗೈರು ಹಾಜರಿಯಲ್ಲಿ ದಾವೆಯನ್ನು ಏಕಪಕ್ಷೀಯವಾಗಿ ತೀರ್ಮಾನಿಸಲಾಗುವುದು. 2023ನೇ ನವೆಂಬರ್ ತಿಂಗಳಿನ 07ನೇ ತಾರೀಖಿನಂದು ನ್ಯಾಯಾಲಯದ ಮೊಹರಿನೊಂದಿಗೆ ಈ ನೋಟೀಸ್ ಕೊಡಲಾಗಿದೆ.

ವಾದಿಯ ಪರ ವಕೀಲರು
**(ಶ್ರೀ ರಾಮನಗೌಡ ಪಾಟೀಲ್)**
ದಿನಾಂಕ 27.10.2023
ಸ್ಥಳ : ಹರಪನಹಳ್ಳಿ

ನ್ಯಾಯಾಲಯದ ಆದೇಶದ ಮೇರೆಗೆ
**ಶಿರಸ್ತೇದಾರರು**
ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ,
ಹರಪನಹಳ್ಳಿ.

# ವಿವಿಧ ಪ್ರಶಸ್ತಿಗಳಿಗಾಗಿ ಅರ್ಜಿ ಆಹ್ವಾನ

ದಾವಣಗೆರೆ, ನ.9- ಮೇಜರ್ ಧ್ಯಾನ್‌ಚಂದ್ ಖೇಲ್ ರತ್ನ ಪ್ರಶಸ್ತಿ, ಅರ್ಜುನ ಪ್ರಶಸ್ತಿ, ದ್ರೋಣಾಚಾರ್ಯ ಪ್ರಶಸ್ತಿ, ಧ್ಯಾನ್‌ಚಂದ್ ಪ್ರಶಸ್ತಿ, ರಾಷ್ಟ್ರೀಯ ಖೇಲ್ ರತ್ನ ಪುರಸ್ಕಾರ ಮತ್ತು ಮೌಲಾನಾ ಅಬ್ದುಲ್ ಕಲಾಂ ಆಜಾದ್ ಪ್ರಶಸ್ತಿಗಾಗಿ ಅರ್ಜಿ ಆಹ್ವಾನಿಸಲಾಗಿದೆ.

ಪ್ರಶಸ್ತಿ ಮಾರ್ಗಸೂಚಿಗಳಿಗೆ ಅನುಸಾರವಾಗಿ ಅರ್ಹರಾಗಿರುವ ಕ್ರೀಡಾಪಟುಗಳು, ತರಬೇತುದಾರರು ಮತ್ತು ಘಟಕಗಳು ಅಧಿಕಾರಿಗಳ ಶಿಫಾರಸ್ಸುಗಳಿಲ್ಲದೆ ಸ್ವಯಂ ಅರ್ಜಿಯನ್ನು ಆನ್‌ಲೈನ್ ಮುಖಾಂತರ ಸಲ್ಲಿಸಬಹುದು.

ಅರ್ಜಿಯನ್ನು ಆನ್‌ಲೈನ್ dbtyas-sports.gov.in ಮುಖಾಂತರ ನಾಳೆ ದಿನಾಂಕ 10 ರೊಳಗಾಗಿ ಸಲ್ಲಿಸಬೇಕು. ಹೆಚ್ಚಿನ ಮಾಹಿತಿಗಾಗಿ ದೂ.ಸಂ: 011-23387432 ಅಥವಾ ಟೋಲ್ ಫ್ರೀ ಸಹಾಯವಾಣಿ ಸಂಖ್ಯೆಗಳು : 1800-202-5155 ಮತ್ತು 1800-258-5155 ಸಂಪರ್ಕಿಸಲು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕರಾದ ಜಯಲಕ್ಷ್ಮಿಬಾಯಿ ಪತ್ರಿಕಾ ಹೇಳಿಕೆಯಲ್ಲಿ ತಿಳಿಸಿದ್ದಾರೆ.

# ರಾಣೇಬೆನ್ನೂರಿನಲ್ಲಿ ಇಂದು ವಿದ್ಯುತ್ ಇಲ್ಲ

ಶ್ರೀ ತುಳಜಾಭವಾನಿ ದೇವಸ್ಥಾನದ ಕಾಮಗಾರಿ ನಿಮಿತ್ತ ನಗರದ ದುರ್ಗಾ ಸರ್ಕಲ್, ಕೌಲಪೇಟೆ, ನೆಹರೂ ಮಾರ್ಕೆಟ್, ದೇವರಗುಡ್ಡ ರಸ್ತೆ, ಕೂನಬೇವು ಪ್ಲಾಟ್, ಹರಳಯ್ಯ ನಗರ, ಗೌಳಿ ಗಲ್ಲಿ & ಬಸವನ ದೇವರ ಗುಡಿ ಏರಿಯಾಗಳಿಗೆ ಇಂದು ಬೆಳಿಗ್ಗೆ 9 ಗಂಟೆಯಿಂದ ಮಧ್ಯಾಹ್ನ 1 ಗಂಟೆವರೆಗೆ ವಿದ್ಯುತ್ ಸರಬರಾಜು ಇರುವುದಿಲ್ಲ.

KA/SK/CTA-275/2021-2023. O/P @ B.V. Nagar P.O. **JANATHAVANI** - Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas


BSC®
B.S. CHANNABASAPPA & SONS
ಸ್ಥಾಪನೆ - 1938
ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ
ಬ್ರಾಂಡ್‌ಗಳು BSC ವಿಶೇಷ ಬೆಲೆಯಲ್ಲಿ ಲಭ್ಯ
#ಬಟ್ಟೆಅಂದರೆBSC
MEN'S FASHION BRANDS
ARROW USA·1851
LOUIS PHILIPPE
Manyavar
BLACKBERRYS
TOMMY HILFIGER
spykar
OXEMBERG
Pepe Jeans LONDON
Levi's
LINEN CLUB
MUFTI
INDIAN TERRAIN
PETER ENGLAND
UNITED COLORS OF BENETTON.
U.S. POLO ASSN.
VAN HEUSEN POWER DRESSING
Allen Solly
KILLER
PUMA
PARK AVENUE
ROOKIES
WOMEN'S FASHION BRANDS
aurelia
W
Levi's
KID'S FASHION BRANDS
UNITED COLORS OF BENETTON.
Pepe Jeans LONDON
INDIAN TERRAIN
Allen Solly
U.S. POLO ASSN.
ಬಿ.ಎಸ್.ಚನ್ನಬಸಪ್ಪ & ಸನ್ಸ್
ದಾವಣಗೆರೆ & ಬೆಳಗಾವಿ

# ಹೋರಾಟಕ್ಕೆ ಕಾನೂನು ಸಾಕ್ಷರತೆ

**(1ನೇ ಪುಟದಿಂದ)** ಎಂದು ತಿಳಿಸಿದರು.

ಪ್ಲಾಸ್ಟಿಕ್ ಮುಕ್ತ ಪರಿಸರ, ಪೋಕ್ಸೋ ಕಾನೂನು ಅರಿವು, ಬಾಲ್ಯ ವಿವಾಹ ನಿಷೇಧ ಕಾನೂನು ಅರಿವು, ಬಾಲ ಕಾರ್ಮಿಕ ಪದ್ಧತಿ ವಿರೋಧ, ರಾಷ್ಟ್ರೀಯ ಸಂಚಾರಿ ನಿಯಮ ಉಲ್ಲಂಘನೆ ಕುರಿತ ಜಾಗೃತಿ ವಿಷಯಗಳ ಅರಿವು ಮೂಡಿಸಲಾಯಿತು. ಜಾಥಾದಲ್ಲಿ ಪಾಲ್ಗೊಂಡ ಎಲ್ಲರಿಗೂ ಪ್ಲಾಸ್ಟಿಕ್ ಮುಕ್ತ ಸಮಾಜಕ್ಕಾಗಿ ಪರಿಸರ ಇಲಾಖೆಯಿಂದ ಬಟ್ಟೆ ಬ್ಯಾಗ್‌ಗಳನ್ನು ವಿತರಿಸಲಾಯಿತು.

ಕಾರ್ಯಕ್ರಮದಲ್ಲಿ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಮತ್ತು ಹಿರಿಯ ಸಿವಿಲ್ ನ್ಯಾಯಾಧೀಶರಾದ ಮಹಾವೀರ ಮ. ಕರೆಣ್ಣವರ್, ಅಪರ ಪೊಲೀಸ್ ವರಿಷ್ಠಾಧಿಕಾರಿ ಸಂತೋಷ್, ಜಿಲ್ಲಾ ವಕೀಲರ ಸಂಘದ ಅಧ್ಯಕ್ಷ ಅರುಣ್‌ಕುಮಾರ್ ಎಲ್.ಹೆಚ್., ಮಹಾನಗರಪಾಲಿಕೆ ಆಯುಕ್ತೆ ರೇಣುಕ, ಕ್ರೀಡಾ ಮತ್ತು ಯುವಜನ ಅಧಿಕಾರಿ ಜಯಲಕ್ಷ್ಮಿ, ಆರ್.ಎಲ್. ಕಾನೂನು ಮಹಾವಿದ್ಯಾಲಯದ ಪ್ರಾಂಶುಪಾಲ ಡಾ. ಯತೀಶ್, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಪ್ರಾದೇಶಿಕ ಅಧಿಕಾರಿ ಡಾ. ಹೆಚ್. ಲಕ್ಷ್ಮೀಕಾಂತ, ಕಾರ್ಮಿಕ ಅಧಿಕಾರಿ ಇಬ್ರಾಹಿಂ, ಲಾ ಕಾಲೇಜು ಉಪನ್ಯಾಸಕರಾದ ವಿದ್ಯಾಧರ ವೇದವರ್ಮ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕಿ ವಾಸಂತಿ ಉಪ್ಪಾರ್, ಪದವಿಪೂರ್ವ ಶಿಕ್ಷಣ ಇಲಾಖೆಯ ಉಪನಿರ್ದೇಶಕ ಕರಿಬಸಪ್ಪ, ಸಾರ್ವಜನಿಕ ಶಿಕ್ಷಣ ಇಲಾಖೆಯ ಕೊಟ್ರೇಶ್ ಜೆ., ಸಂಚಾರಿ ಪೊಲೀಸ್ ಠಾಣೆ ವೃತ್ತ ನಿರೀಕ್ಷಕ ನಲವಾಗಲು ಮಂಜುನಾಥ್, ಡಿ.ಹೆಚ್.ಓ ಡಾ|| ಷಣ್ಮುಖಪ್ಪ, ಜಿಲ್ಲಾ ವಕೀಲರ ಸಂಘದ ಉಪಾಧ್ಯಕ್ಷ ಜಿ.ಕೆ. ಬಸವರಾಜು ಗೋಪನಾಳ್, ಕಾರ್ಯದರ್ಶಿ ಬಸವರಾಜ್ ಎಸ್., ಸಹ ಕಾರ್ಯದರ್ಶಿ ಎ.ಎಸ್. ಮಂಜುನಾಥ್ ಸೇರಿದಂತೆ ಎ.ವಿ. ಕಮಲಮ್ಮ ಮಹಿಳಾ ಕಾಲೇಜು, ಸೀತಮ್ಮ ಬಾಲಕಿಯರ ಸರ್ಕಾರಿ ಪ್ರೌಢಶಾಲೆ, ಬಾಲಕರ ಸರ್ಕಾರಿ ಪ್ರೌಢಶಾಲೆ, ಡಿ.ಆರ್.ಎಂ. ಸೈನ್ಸ್ ಕಾಲೇಜು, ಆರ್.ಎಲ್. ಲಾ ಕಾಲೇಜು ಹಾಗೂ ಅಂಗನವಾಡಿ ಮತ್ತು ಆಶಾ ಕಾರ್ಯಕರ್ತೆಯರು ಬೃಹತ್ ಜಾಥಾದಲ್ಲಿ ಪಾಲ್ಗೊಂಡಿದ್ದರು.

ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರ, ಜಿಲ್ಲಾ ವಕೀಲರ ಸಂಘ, ಆರ್.ಎಲ್. ಕಾನೂನು ಮಹಾ ವಿದ್ಯಾಲಯ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಶಿಕ್ಷಣ ಇಲಾಖೆ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಮತ್ತು ಪೊಲೀಸ್ ಇಲಾಖೆ ಹಾಗೂ ವಿವಿಧ ಕಾಲೇಜುಗಳು, ದಾವಣಗೆರೆ ಇವರ ಸಂಯುಕ್ತಾಶ್ರಯದಲ್ಲಿ ಜಾಥಾ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು.

# 'ನಿಮ್ಮನ್ನು ನೀವು ನಂಬಿದರೆ ಮಾತ್ರ ಜೀವನದಲ್ಲಿ ಯಶಸ್ಸು'

## ಪದವಿ ಪ್ರದಾನ ಸಮಾರಂಭದಲ್ಲಿ ಜಿ.ಎಂ ವಿವಿ ಕುಲಪತಿ ಡಾ.ಶಂಕಪಾಲ್ ಕಿವಿಮಾತು



ದಾವಣಗೆರೆ, ನ.9- ಪ್ರತಿಭಾವಂತ ಪದವೀಧರರಿಗೆ ಹಲವಾರು ಅವಕಾಶಗಳಿವೆ. ನಿಮ್ಮನ್ನು ನೀವು ನಂಬಿ ಮುಂದೆ ಸಾಗಿದರೆ ಜೀವನದಲ್ಲಿ ಯಶಸ್ಸು ಸಾಧಿಸಬಹುದು ಎಂದು ಜಿ.ಎಂ ವಿಶ್ವವಿದ್ಯಾನಿಲಯದ ಕುಲಪತಿ ಡಾ. ಎಸ್. ಆರ್. ಶಂಕಪಾಲ್ ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು.

ನಗರದ ಜಿ.ಎಂ.ಎಸ್ ಅಕಾಡೆಮಿ ಪ್ರಥಮ ದರ್ಜೆ ಕಾಲೇಜ್‌ನಲ್ಲಿ ಜರುಗಿದ 5 ಮತ್ತು 6ನೇ ಪದವಿ ಪ್ರದಾನ ಸಮಾರಂಭದ ಮುಖ್ಯ ಅತಿಥಿಗಳಾಗಿ ಆಗಮಿಸಿ, ಅವರು ಮಾತನಾಡಿದರು.

ಶೈಕ್ಷಣಿಕ ಪದವಿ ಪಡೆದು ವಿದ್ಯಾರ್ಥಿ ಜೀವನದಿಂದ ನಿಜವಾದ ಜೀವನಕ್ಕೆ ಕಾಲಿಟ್ಟಿರುವ ನಿಮಗೆ ನಿಜವಾದ ಸವಾಲುಗಳು ಈಗ ಎದುರಾಗುತ್ತವೆ. ನಿಮ್ಮ ಜೀವನವನ್ನು ನೀವೇ ರೂಪಿಸಿಕೊಳ್ಳಬೇಕಾದ ಅನಿವಾರ್ಯತೆ ಇದೆ ಎಂದರು.

ಮತ್ತೋರ್ವ ಅತಿಥಿ ವಿ.ಟಿ.ಯು, ಬೆಳಗಾಂ ವಿಶೇಷ ಅಧಿಕಾರಿ ಡಾ. ವಿರುಪಾಕ್ಷಪ್ಪ ಎಸ್. ಬೆಟಗೇರಿ ಮಾತನಾಡಿ, ವಿದ್ಯಾರ್ಥಿ ದೆಸೆಯಿಂದ ಜೀವನದ ವ್ಯತ್ಯಾಸ, ಪರಿಮಿತಗಳು, ಸಂಶೋಧನೆ ಆವಿಷ್ಕಾರ ಇದ್ದರೆ ಫಲ ದೊರೆಯುವುದನ್ನು ಕಾಣಬಹುದು. ಮಾನವೀಯತೆ ಮುಖ್ಯವಾಗಿರಬೇಕು ಎಂದು ತಿಳಿಸಿದರು.

ಚೇತನ ಬಿಸಿನೆಸ್ ಸ್ಕೂಲ್, ಎಂ.ಬಿ.ಎ ನಿರ್ದೇಶಕ ಡಾ. ವಿಶ್ವನಾಥ ಕೋರಿ ಮಾತನಾಡಿ, ಈಗ ಇಂಜಿನಿಯರಿಂಗ್ ವಿದ್ಯಾರ್ಥಿಗಳು ಸಹ ಬ್ಯಾಂಕ್‌ನಲ್ಲಿ ಕೆಲಸ ಪಡೆಯಲು ಮುಂದಾಗಿದ್ದಾರೆ. ಇದರಿಂದ ನಿರುದ್ಯೋಗ ಸಮಸ್ಯೆ ಕಾರ್ಪೊರೇಟ್ ಜಗತ್ತಿನಲ್ಲಿ ಮತ್ತು ಕೈಗಾರಿಕಾ ಜಗತ್ತಿನಲ್ಲಿ ಕಂಡುಬರುತ್ತಿದೆ ಎಂದರು.

ಧಾರವಾಡದ ಎಸ್.ಡಿ.ಎಮ್ ಇಂಜಿನಿಯರಿಂಗ್ ಮತ್ತು ಟೆಕ್ನಾಲಜಿ ಕಾಲೇಜ್‌ನ ಎಐ ಮತ್ತು ಎಮ್‌ಎಲ್ ವಿಭಾಗದ ಡಾ. ಲೀನಾ ಸಕ್ರಿ ಇವರು ಮಾತನಾಡಿ ಎಲ್ಲರ ಯೋಜನೆಗಳು ಬೇರೆ ಬೇರೆ. ಕಲಿಕೆ ಎನ್ನುವುದು ನಿರಂತರ ಕ್ರಿಯೆ. ಜ್ಞಾನ, ವಿದ್ಯೆ, ಕನಸು, ಉದ್ದೇಶ, ವೈಯಕ್ತಿಕ ಮೌಲ್ಯ, ಮಾನವೀಯ ಮೌಲ್ಯ ಉಳಿಯಬೇಕು ಮತ್ತು ಮಾರುಕಟ್ಟೆ, ಉದ್ಯೋಗ, ಕೈಗಾರಿಕಾ ಕ್ಷೇತ್ರದಲ್ಲಿ ಕೌಶಲ್ಯಕ್ಕೆ ಬೆಲೆ ಹೆಚ್ಚು ಎಂದು ತಿಳಿಸಿದರು.

ಕಾಲೇಜಿನ ಪ್ರಾಚಾರ್ಯರಾದ ಪ್ರೊ. ಶ್ವೇತ ಮರಿಗೌಡರ್ 2021-22 ಹಾಗೂ 2022-23ನೇ ಸಾಲಿನ ಪದವಿ ಪಡೆದ ವಿದ್ಯಾರ್ಥಿಗಳಿಗೆ ಪ್ರತಿಜ್ಞಾ ವಿಧಿ ಬೋಧಿಸಿದರು.

ರ‍್ಯಾಂಕ್ ಪಡೆದ ವಿದ್ಯಾರ್ಥಿಗಳಾದ ಪ್ರಸಾದ್ ವಿ. ಕಾಮತ್, ಹರ್ಷಿತಾ ಪಿ, ಹರ್ಷಿತಾ ಡಿ.ಎಂ, ಅಂಜುಮ್ ಭಾನು, ಪಿ. ಅಶ್ವಿನಿ ಇವರನ್ನು ಕಾಲೇಜಿನ ವತಿಯಿಂದ ನಗದು ಬಹುಮಾನ ನೀಡಿ ಸನ್ಮಾನಿಸಲಾಯಿತು.

ಪ್ರೊ.ಎಂ. ಸಚಿನ್ ವರದಿ ವಾಚಿಸಿದರು. ಪ್ರೊ. ಲಿನೆಟ್ ಜಾನ್ ಮತ್ತು ಡಾ. ರೂಪ. ಎಂ.ವಿ. ನಿರೂಪಣೆ ಮಾಡಿದರು. ಡಾ. ಶ್ವೇತಾ ಹೆಚ್. ಎಸ್ ವಂದಿಸಿದರು.

# ಕಾರ್ಮಿಕರು ಸಂಪತ್ತನ್ನು ಉತ್ಪಾದಿಸಿದರೆ ಉಳಿದವರು ಅನುಭವಿಸುತ್ತಾರೆ : ಮುಖ್ಯಮಂತ್ರಿ

ಬೆಂಗಳೂರು, ನ.9 - ದೇಶದಲ್ಲಿ ಕಾರ್ಮಿಕ ವರ್ಗ ಸಂಪತ್ತನ್ನು ಉತ್ಪಾದಿಸುತ್ತದೆ. ಉಳಿದವರು ಅನುಭವಿಸುತ್ತಾರೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಹೇಳಿದರು.

ಕಾರ್ಮಿಕ ಇಲಾಖೆ ವಿಧಾನಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ಹಮ್ಮಿಕೊಂಡಿದ್ದ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಮಕ್ಕಳಿಗೆ 2022-23 ನೇ ಸಾಲಿನ ಶೈಕ್ಷಣಿಕ ಧನ ಸಹಾಯ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ಪ್ರತಿಯೊಬ್ಬರೂ ಉತ್ಪಾದನೆಯಲ್ಲಿ ಪಾಲ್ಗೊಳ್ಳಬೇಕು ಎನ್ನುವ ಉದ್ದೇಶದಿಂದಲೇ ಬಸವಣ್ಣನವರು ಕಾಯಕ ಪದ್ಧತಿಯನ್ನು ಹೇಳಿದರು.

ಸಂವಿಧಾನದ ಪ್ರಕಾರ ಪ್ರತಿಯೊಬ್ಬರೂ ಸಮಾಜದ ಸಂಪತ್ತಿನಲ್ಲಿ ಸಮಪಾಲು ಹೊಂದಬೇಕು. ಹೀಗಾಗಿ ನಾವು ಕಾರ್ಮಿಕರ ಮಕ್ಕಳಿಗೆ ಈ ರೀತಿಯ ಕಾರ್ಯಕ್ರಮಗಳನ್ನು ರೂಪಿಸಿದ್ದೇವೆ. ಇದರಿಂದ ಸಮ ಸಮಾಜದ ಆಶಯಗಳನ್ನು ಜಾರಿಗೊಳಿಸುವ ಪ್ರಯತ್ನ ಮಾಡುತ್ತಿದ್ದೇವೆ ಎಂದರು.

ಶೂದ್ರ ಮತ್ತು ಮಹಿಳೆಯರನ್ನು ಶತ-ಶತಮಾನಗಳ ಕಾಲ ಶಿಕ್ಷಣದಿಂದ ವಂಚಿತರನ್ನಾಗಿ ಮಾಡಲಾಗಿತ್ತು. ಈ ಕಾರಣಕ್ಕೇ ಶೂದ್ರ ವರ್ಗಗಳು ಹಿಂದುಳಿಯುವಂತಾಯಿತು. ಅಸಮಾನತೆ ಹೆಚ್ಚಾಯಿತು. ಈ ಅಸಮಾನತೆಯನ್ನು ಅಳಿಸುವ ಉದ್ದೇಶ ನಮ್ಮ ಸರ್ಕಾರದ್ದು ಎಂದು ಹೇಳಿದರು.

9,60,000 ಮಕ್ಕಳಿಗೆ ಕಲ್ಯಾಣ ನಿಧಿ ಮೂಲಕ ಸಹಾಯ ಧನ ಬಿಡುಗಡೆ ಆಗುತ್ತಿದೆ. ಇದರ ಸದುಪಯೋಗಪಡಿಸಿಕೊಂಡು ಶಿಕ್ಷಣವಂತರಾಗಬೇಕು. ಶಿಕ್ಷಣದಿಂದ ಅಸಮಾನತೆ ದೂರ ಮಾಡಬಹುದು ಎಂದರು. ಸಹಾಯಧನ ಪಡೆಯುತ್ತಿರುವ ಇವರೆಲ್ಲರೂ ಅಸಂಘಟಿತ ಕಾರ್ಮಿಕರ ಮಕ್ಕಳು. ಶೇ. 83 ರಷ್ಟು ಕಾರ್ಮಿಕರು ಇವತ್ತಿಗೂ ಅಸಂಘಟಿತರಾಗಿದ್ದಾರೆ. ದೇಶದಲ್ಲಿ ರೈತ ಸಮುದಾಯವನ್ನು ಬಿಟ್ಟರೆ ಎರಡನೇ ಅತೀ ದೊಡ್ಡ ಸಮುದಾಯ ಕಾರ್ಮಿಕ ಸಮುದಾಯ ಆಗಿದೆ ಎಂದು ಹೇಳಿದರು.

# ರಾಷ್ಟ್ರಮಟ್ಟದ 'ಮಾಸ್ಟರ್ ಗೇಮ್'ನಲ್ಲಿ ಜಿಲ್ಲೆಯ ಹಿರಿಯ ಕ್ರೀಡಾ ಪಟುಗಳ ಸಾಧನೆ




ದಾವಣಗೆರೆ, ನ.9- ಧಾರವಾಡದ ಆರ್. ಎನ್.ಶೆಟ್ಟಿ ಕ್ರೀಡಾಂಗಣದಲ್ಲಿ ಜರುಗಿದ ಕರ್ನಾಟಕ ಮುಕ್ತ ರಾಷ್ಟ್ರಮಟ್ಟದ ಅಥ್ಲೆಟಿಕ್ ಕ್ರೀಡಾಕೂಟದಲ್ಲಿ ಜಿಲ್ಲೆಯ ಕ್ರೀಡಾಪಟುಗಳು ಉತ್ತಮ ಸಾಧನೆ ಮಾಡಿದ್ದಾರೆ.

45 ವರ್ಷ ಮೇಲ್ಪಟ್ಟ ಪುರುಷರ ವಿಭಾಗದಲ್ಲಿ ಮಾಜಿ ಯೋಧ ಮಹಮದ್ ರಫಿ 1.5 ಕಿ.ಮೀ ಓಟ ಮತ್ತು 400 ಮೀ ಹರ್ಡಲ್ಸ್ ಓಟದಲ್ಲಿ ಬೆಳ್ಳಿ ಪದಕ ಮತ್ತು 10 ಕಿ.ಮೀ ಓಟದಲ್ಲಿ ಕಂಚಿನ ಪದಕ ಪಡೆದಿರುತ್ತಾರೆ.

50 ವರ್ಷ ಮೇಲ್ಪಟ್ಟ ಪುರುಷರ ವಿಭಾಗದಲ್ಲಿ, ಕೆ.ಹೆಚ್.ಅಣ್ಣಪ್ಪ 400 ಮೀ ಹರ್ಡಲ್ಸ್ ಓಟದಲ್ಲಿ ಚಿನ್ನದ ಪದಕ, 5 ಮತ್ತು 10 ಕಿ.ಮೀ ಓಟದಲ್ಲಿ ಕಂಚಿನ ಪದಕ ಗಳಿಸಿದ್ದಾರೆ.

70 ವರ್ಷ ಮೇಲ್ಪಟ್ಟ ಪುರುಷ ವಿಭಾಗದಲ್ಲಿ ಲಕ್ಷ್ಮಣರಾವ್ ಸಾಳಂಕಿ ಅವರು 800 ಮೀ ಓಟದಲ್ಲಿ ಬೆಳ್ಳಿ ಪದಕ, 100ಮೀ ಓಟದಲ್ಲಿ ಕಂಚಿನ ಪದಕ, 5 ಮತ್ತು 10 ಕಿ.ಮೀ ಓಟದಲ್ಲಿ ಚಿನ್ನದ ಪದಕ ಗಳಿಸಿದ್ದಾರೆ.

60 ವರ್ಷ ಮೇಲ್ಪಟ್ಟ ಮಹಿಳಾ ವಿಭಾಗದಲ್ಲಿ ವಿಶಾಲಾಕ್ಷಿ, 300 ಮೀ ಓಟ, 80 ಮೀ ಹರ್ಡಲ್ಸ್ ಓಟದಲ್ಲಿ ಚಿನ್ನ, 100 ಮತ್ತು 60 ಕಿ.ಮೀ ಓಟದ ಸ್ಪರ್ಧೆಯಲ್ಲಿ ಬೆಳ್ಳಿ ಪದಕ ಗಳಿಸಿದ್ದಾರೆ.

50 ವರ್ಷ ಮೇಲ್ಪಟ್ಟ ಪುರುಷ ವಿಭಾಗದಲ್ಲಿ ಎನ್.ಜಿ. ಶ್ರೀನಾಥ್ 200 ಮತ್ತು 400 ಮೀ ಓಟದಲ್ಲಿ ಬೆಳ್ಳಿ ಪದಕ, 800ಮೀ ಓಟದಲ್ಲಿ ಕಂಚಿನ ಪದಕ ಗಳಿಸಿದ್ದಾರೆ.

80 ವರ್ಷ ಮೇಲ್ಪಟ್ಟ ಪುರುಷ ವಿಭಾಗದಲ್ಲಿ ಗುರುಶಾಂತಪ್ಪ ತ್ರಿಪಲ್ ಜಂಪ್ ಚಿನ್ನದ ಪದಕ, ಲಾಂಗ್ ಜಂಪ್‌ನಲ್ಲಿ ಬೆಳ್ಳಿ ಮತ್ತು ಹ್ಯಾಮರ್ ಥ್ರೋ ಮತ್ತು 5 ಕಿ.ಮೀ ರೇಸ್ ವಾಕ್‌ನಲ್ಲಿ ಕಂಚಿನ ಪದಕ ಪಡೆದಿದ್ದಾರೆ.

40 ವರ್ಷ ಮೇಲ್ಪಟ್ಟ ಪುರುಷರ ವಿಭಾಗದಲ್ಲಿ ನಟರಾಜ್, 800 ಮೀ ಓಟ ಮತ್ತು 5 ಕಿ.ಮೀ ರೇಸ್ ವಾಕ್‌ನಲ್ಲಿ ಕಂಚಿನ ಪದಕ ಪಡೆದಿದ್ದಾರೆ.

ಮುಂಬರುವ ದಿನಗಳಲ್ಲಿ ಮಲೇಶಿಯಾದಲ್ಲಿ ನಡೆಯುವ ಅಂತರರಾಷ್ಟ್ರೀಯ ಕ್ರೀಡಾಕೂಟದಲ್ಲಿ ಭಾಗವಹಿಸುವ ಅರ್ಹತೆಯನ್ನು ಈ ಕ್ರೀಡಾಪಟುಗಳು ಪಡೆದಿರುತ್ತಾರೆ.

# ಕಾಂತರಾಜ್ ವರದಿ ಅವೈಜ್ಞಾನಿಕ

**(1ನೇ ಪುಟದಿಂದ)** ಒಕ್ಕಲಿಗ ಸಮುದಾಯದವರು ವರದಿ ವಿರೋಧಿಸಿದ್ದರು. ಈಗ ಲಿಂಗಾಯತ – ವೀರಶೈವ ಸಮಾಜ ಸಹ ವರದಿಯನ್ನು ಟೀಕಿಸಿದೆ. ದಲಿತರು ಹಾಗೂ ಇತರೆ ಹಿಂದುಳಿದ ವರ್ಗದವರು ವರದಿ ಪ್ರಕಟಿಸಲು ಒತ್ತಡ ಹೇರುತ್ತಿದ್ದಾರೆ. ಈ ವಿಷಯ ಸರ್ಕಾರವನ್ನು ಪೇಚಿಗೆ ಸಿಲಕಿಸುವ ಸಾಧ್ಯತೆ ಇದೆ.

ಕಳೆದ ವಾರ ಒಕ್ಕಲಿಗ ನಾಯಕರು ಸಭೆಯೊಂದನ್ನು ನಡೆಸಿದ್ದರು. ಸಭೆಯಲ್ಲಿ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹಾಗೂ ಸಮುದಾಯದ ಸ್ವಾಮೀಜಿಗಳೂ ಪಾಲ್ಗೊಂಡಿದ್ದರು. ಜಾತಿ ಸಮೀಕ್ಷೆ ತಿರಸ್ಕರಿಸಬೇಕೆಂದು ಸಭೆಯಲ್ಲಿ ನಿರ್ಧಾರ ತೆಗೆದುಕೊಳ್ಳಲಾಗಿತ್ತು.

ಬುಧವಾರ ಸಭೆ ನಡೆಸಿದ್ದ ದಲಿತರು, ಬುಡಕಟ್ಟು ಜನರು ಹಾಗೂ ಇತರೆ ಹಿಂದುಳಿದ ವರ್ಗಗಳ ಪ್ರತಿನಿಧಿಗಳು, ಕಾಂತರಾಜ್ ವರದಿ ಬಿಡುಗಡೆ ಮಾಡಬೇಕೆಂದು ಆಗ್ರಹಿಸಿದ್ದರು.

ರಾಜ್ಯ ಹಿಂದುಳಿದ ವರ್ಗಗಳ ಆಯೋಗದ ಆಗಿನ ಸದಸ್ಯ ಕಾರ್ಯದರ್ಶಿ ಅಂತಿಮ ವರದಿಗೆ ಸಹಿ ಹಾಕಿಲ್ಲ. ಇದೂ ಸಹ ತಾಂತ್ರಿಕವಾಗಿ ವರದಿ ಬಿಡುಗಡೆಗೆ ಅಡ್ಡಿಯಾಗಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ.

ವರದಿ ಈಗಲೂ ಆಯೋಗದ ಬಳಿ ಇದೆ. ಅದನ್ನು ಸಲ್ಲಿಸಿದ ನಂತರ ಸಂಪುಟದ ಎದುರು ಮಂಡಿಸಲಾಗುವುದು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

# ಸುರ್ಜೇವಾಲಾಗೆ ವಾರಂಟ್‌ನಿಂದ ರಕ್ಷಣೆ



ನವದೆಹಲಿ, ನ. 9 - ಇಪ್ಪತ್ತೂರು ವರ್ಷಗಳ ಹಿಂದಿನ ಅಪರಾಧ ಪ್ರಕರಣಕ್ಕೆ ಸಂಬಂಧಿಸಿದಂತೆ ಕಾಂಗ್ರೆಸ್ ನಾಯಕ ರಣದೀಪ್ ಸಿಂಗ್ ಸುರ್ಜೇವಾಲಾ ವಿರುದ್ಧ ವಾರಣಾಸಿಯ ಸಂಸದ ಹಾಗೂ ಶಾಸಕರ ನ್ಯಾಯಾಲಯ ಹೊರಡಿಸಿದ್ದ ಜಾಮೀನು ರಹಿತ ವಾರಂಟ್‌ನಿಂದ ಸುಪ್ರೀಂ ಕೋರ್ಟ್ ರಕ್ಷಣೆ ನೀಡಿದೆ.

ಸುರ್ಜೇವಾಲಾ ಅವರು ಐದು ವಾರಗಳಲ್ಲಿ ವಾರಣಾಸಿಯ ವಿಶೇಷ ನ್ಯಾಯಾಲಯಕ್ಕೆ ತೆರಳಿ ವಾರಂಟ್ ರದ್ದುಪಡಿಸಿಕೊಳ್ಳಬೇಕು ಎಂದು ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ನೇತೃತ್ವದ ಪೀಠ ತಿಳಿಸಿದೆ. ಪೀಠದಲ್ಲಿ ನ್ಯಾಯಮೂರ್ತಿಗಳಾದ ಜೆ.ಬಿ. ಪರ್ಡಿವಾಲ ಹಾಗೂ ಮನೋಜ್ ಮಿಶ್ರ ಅವರಿದ್ದಾರೆ. ಸುರ್ಜೇವಾಲಾ ಅವರು 2000ದಲ್ಲಿ ಭಾರತೀಯ ಯುವ ಕಾಂಗ್ರೆಸ್ ಅಧ್ಯಕ್ಷರಾಗಿದ್ದಾಗ ಪ್ರತಿಭಟನೆ ನಡೆಸುವ ವೇಳೆ ದಾಂಧಲೆ ನಡೆಸಿದ್ದರು ಎಂದು ಪ್ರಕರಣ ದಾಖಲಿಸಲಾಗಿತ್ತು.

# ಪ್ರಾಮಾಣಿಕತೆ ಮೆರೆದ ಸರ್ಕಾರಿ ಬಸ್ ಸಿಬ್ಬಂದಿ

ದಾವಣಗೆರೆ, ನ.9- ಪ್ರಯಾಣಿಕರೊಬ್ಬರು ಬಸ್‌ನಲ್ಲಿ ಬಿಟ್ಟು ಹೋಗಿದ್ದ 20 ಸಾವಿರ ಹಣದ ಜೊತೆ ದಾಖಲಾತಿಗಳು ಇದ್ದ ಬ್ಯಾಗನ್ನು ಮರಳಿ ಕಳೆದುಕೊಂಡವರಿಗೆ ತಲುಪಿಸುವಲ್ಲಿ ಸರ್ಕಾರಿ ಬಸ್ ಚಾಲಕ ಮಹಾಂತೇಶ ಟಿ.ನಾಗರಾಳ ಮತ್ತು ನಿರ್ವಾಹಕ ಶ್ರೀಶೈಲ ಎಂ. ಕೋರಿ ಪ್ರಾಮಾಣಿಕತೆ ಮೆರೆದಿದ್ದಾರೆ.

ಪ್ರಯಾಣಿಕ ರೇವಣಸಿದ್ದಯ್ಯ ಎಂಬುವರು ಹರಿಹರದಲ್ಲಿ ಇಳಿಯುವಾಗ ಬ್ಯಾಗ್ ಬಸ್‌ನಲ್ಲಿಯೇ ಬಿಟ್ಟಿರುತ್ತಾರೆ. ಬಸ್ ಗಜೇಂದ್ರಗಢದಿಂದ ಚಿಕ್ಕಮಗಳೂರಿಗೆ ಹೋಗಬೇಕಾಗಿರುವುದರಿಂದ, ಆ ಬ್ಯಾಗನ್ನು ಮಾರ್ಗ ಮಧ್ಯದ ಹೊನ್ನಾಳಿ ಬಸ್ ಸ್ಟ್ಯಾಂಡ್ ಕಂಟ್ರೋಲರ್ ನಾಗರಾಜ ಎಂಬುವರ ಕಡೆ ಕೊಟ್ಟು ಹೋಗಿರುತ್ತಾರೆ.

ಬ್ಯಾಗ್‌ನಲ್ಲಿ ಇದ್ದ ಫೋನ್ ನಂಬರ್‌ಗೆ ಸಂಪರ್ಕಿಸಿದಾಗ, ವಾರಸುದಾರ ರೇವಣಸಿದ್ದಯ್ಯ ಹೊನ್ನಾಳಿ ಪೋಲಿಸ್ ಠಾಣೆಗೆ ಬಂದು ಪೊಲೀಸ್ ಉಪಾಧೀಕ್ಷಕ ಪ್ರಶಾಂತ್ ಮನ್ನೋಳಿ, ಇನ್ಸ್‌ಪೆಕ್ಟರ್ ಸುನೀಲ್ ಕುಮಾರ್ ಮತ್ತು ಡಿಪೋ ಮ್ಯಾನೇಜರ್ ಕೆ. ಮಹೇಶ್ವರಪ್ಪ ಮತ್ತು ಕಂಟ್ರೋಲರ್ ನಾಗರಾಜರ ಸಮ್ಮುಖದಲ್ಲಿ ಬ್ಯಾಗನ್ನು ಪಡೆದುಕೊಂಡರು. ಬಸ್‌ನ ಚಾಲಕ ಮತ್ತು ನಿರ್ವಾಹಕರ ಪ್ರಾಮಾಣಿಕ ಸೇವೆಯನ್ನು ಪ್ರಶಂಸಿಸಿದರು.

# ಅಪ್ಪರ್‌ತುಂಗಾ ಕಾಲುವೆಯ ನೀರು ಅವಧಿ ವಿಸ್ತರಿಸಲು ರವೀಂದ್ರಗೌಡ ಪಾಟೀಲ ಮನವಿ

ರಾಣೇಬೆನ್ನೂರು, ನ.9- ಮುಂಗಾರು ಮಳೆ ಕೈಕೊಟ್ಟಿದ್ದರಿಂದ ಹಾವೇರಿ ಜಿಲ್ಲೆಯನ್ನು ಸಂಪೂರ್ಣ ಬರಗಾಲ ಪೀಡಿತ ಜಿಲ್ಲೆಯಂದು ಸರ್ಕಾರವೇ ಘೋಷಣೆ ಮಾಡಿರುವ ಹಿನ್ನೆಲೆಯಲ್ಲಿ ಪ್ರತಿ ವರ್ಷದಂತೆ ಈ ವರ್ಷವೂ ತುಂಗಾ ಮೇಲ್ದಂಡೆ ಯೋಜನೆಯ ನಿಯಮಾವಳಿಗಳ ಪ್ರಕಾರ ನಿಗದಿತ ವೇಳೆಗೆ ಕಾಲುವೆಗೆ ನೀರು ಹರಿಸುವಂತೆ ರೈತ ಮುಖಂಡ ರವೀಂದ್ರಗೌಡ ಎಫ್. ಪಾಟೀಲ ಶಿವಮೊಗ್ಗದ ನೀರಾವರಿ ಇಲಾಖೆ ಮುಖ್ಯ ಇಂಜಿನಿಯರ್‌ಗೆ ಪತ್ರ ಬರೆದು ವಿನಂತಿಸಿದ್ದಾರೆ.

ಪ್ರಸಕ್ತ ತೀವ್ರ ಬರಗಾಲದ ಸನ್ನಿವೇಶದಲ್ಲಿ ಅತ್ಯಂತ ಅವಶ್ಯವಾಗಿ ರೈತರು ಬೆಳೆದ ಸೂರ್ಯಕಾಂತಿ, ವಿಜಾಪುರ ಮತ್ತು ಹೈಬ್ರಿಡ್ ಊಟ ಮಾಡುವ ಜೋಳದ ಬೆಳೆಗಳಿಗೆ ಕೊನೆ ಘಳಿಗೆಯಲ್ಲಿ ಬೇಕಾಗಿರುವ ನೀರಿನ ಬವಣೆಯನ್ನು ನೀಗಿಸುವುದರ ಜೊತೆಗೆ ಜಾನುವಾರುಗಳಿಗೆ ಬೇಕಾಗುವ ಮೇವು ಬೆಳವಣಿಗೆಗೆ ಹಾಗೂ ಜಾನುವಾರು ಹಾಗೂ ಕಾಡುಪ್ರಾಣಿಗಳಿಗೆ ನೀರಿನ ಸಮಸ್ಯೆಯಾಗದಂತೆ ಇಲಾಖೆ ಎಚ್ಚರಿಸಬೇಕೆಂದು ವಿನಂತಿಸಿದ್ದಾರೆ.

# ಉಚ್ಚಾಟನೆಗೆ ಸಮಿತಿ ಶಿಫಾರಸ್ಸು

**(1ನೇ ಪುಟದಿಂದ)** ವಿರೋಧಿಸಿದ್ದಾರೆ ಎಂದಿದ್ದಾರೆ.

ಸಮಿತಿ ಪಕ್ಷಪಾತಿಯಾಗಿ ಹಾಗೂ ತಪ್ಪಿ ನಿಂದ ಶಿಫಾರಸ್ಸು ನಿರ್ಧಾರ ತೆಗೆದುಕೊಂಡಿದೆ ಎಂದು ಪ್ರತಿಪಕ್ಷದ ಸದಸ್ಯರು ಹೇಳಿದ್ದಾರೆ.

ವರದಿಯನ್ನು ಈಗ ಲೋಕಸಭಾಧ್ಯಕ್ಷ ಓಂ ಬಿರ್ಲಾ ಅವರಿಗೆ ಕಳಿಸಲಾಗುವುದು. ಬಿರ್ಲಾ ಅವರು ವರದಿ ಪ್ರಕಟಿಸುವ ಬಗ್ಗೆ ನಿರ್ಧಾರ ತೆಗೆದುಕೊಳ್ಳಲಿದ್ದಾರೆ. ಮುಂದಿನ ಲೋಕಸಭಾ ಅಧಿವೇಶನದಲ್ಲಿ ವರದಿಯನ್ನು ಮಂಡಿಸಲಾಗುವುದು. ನಂತರ ಈ ಬಗ್ಗೆ ಚರ್ಚೆ ನಡೆಸಿ, ವಿಷಯವನ್ನು ಮತಕ್ಕೆ ಹಾಕುವ ಮೂಲಕ ನಿರ್ಧಾರ ತೆಗೆದುಕೊಳ್ಳಲಾಗುವುದು.

ಕಾಂಗ್ರೆಸ್ ಸಂಸದೆ ಪ್ರಣೀತ್ ಕೌರ್ ಅವರು ವರದಿಯ ಪರವಾಗಿ ಮತ ಚಲಾಯಿಸಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಪಕ್ಷ ವಿರೋಧಿ ಚಟುವಟಿಕೆಯ ಆರೋಪದ ಮೇಲೆ ಕೌರ್ ಅವರನ್ನು ಕಾಂಗ್ರೆಸ್ ಪಕ್ಷದಿಂದ ಕಳೆದ ಫೆಬ್ರವರಿಯಲ್ಲಿ ಅಮಾನತ್ತುಗೊಳಿಸಲಾಗಿತ್ತು.

ಕೌರ್ ಅವರು ಪಂಜಾಬ್‌ನ ಮಾಜಿ ಮುಖ್ಯಮಂತ್ರಿ ಅಮರಿಂದರ್ ಸಿಂಗ್ ಪತ್ನಿ. ಅಮರಿಂದರ್ ಸಿಂಗ್ ಅವರು ಕಾಂಗ್ರೆಸ್ ತೊರೆದು ಬಿಜೆಪಿಗೆ ಸೇರ್ಪಡೆಯಾಗಿದ್ದಾರೆ.

# ಶಾಸಕರು, ಕಾರ್ಯಕರ್ತರ ಜೊತೆ ಡಿಕೆಶಿ ಉಪಹಾರ ಸಭೆ

ಬೆಂಗಳೂರು, ನ. 9 - ಕಾಂಗ್ರೆಸ್ ಶಾಸಕರು ಮತ್ತು ಕಾರ್ಯಕರ್ತರೊಂದಿಗೆ ನಿಯಮಿತವಾಗಿ ಉಪಹಾರ ಸಭೆ ನಡೆಸಿ, ಅವರ ಕುಂದುಕೊರತೆಗಳು, ದೂರುಗಳು ಮತ್ತು ಸಲಹೆಗಳನ್ನು ಆಲಿಸುವುದಾಗಿ ಉಪಮುಖ್ಯಮಂತ್ರಿ ಮತ್ತು ಕೆ.ಪಿ.ಸಿ.ಸಿ. ಅಧ್ಯಕ್ಷ ಡಿ.ಕೆ. ಶಿವಕುಮಾರ್ ಅವರು ಹೇಳಿದ್ದಾರೆ.

ಲೋಕಸಭಾ ಚುನಾವಣೆಗೆ ಮುಂಚೆ ಶಾಸಕರು ಹಾಗೂ ಹಿರಿಯ ಪದಾಧಿಕಾರಿಗಳಲ್ಲಿ ಇರುವ ಅಸಮಾಧಾನ ಬಗೆಹರಿಸಲು ಶಿವಕುಮಾರ್ ಮುಂದಾಗಿದ್ದಾರೆ. ಬೆಳಗ್ಗೆ 10ರಿಂದ 10.30ರವರೆಗೆ ಶಾಸಕರಿಗೆ ಸಮಯ ನಿಗದಿ ಮಾಡಿದ್ದೇನೆ. ನಮ್ಮ ಪಕ್ಷದ ಕಾರ್ಯಕರ್ತರಿಗೂ ಸಮಯ ನಿಗದಿಗೆ ನಿರ್ಧರಿಸಿದ್ದೇನೆ ಎಂದು ಶಿವಕುಮಾರ್ ಸುದ್ದಿಗಾರರಿಗೆ ತಿಳಿಸಿದರು. ಈ ಸಭೆಗಳು ಶಾಸಕರ ಮತ್ತು ಅವರ ಕ್ಷೇತ್ರಗಳಲ್ಲಿನ ಅಭಿವೃದ್ಧಿ ಕಾರ್ಯಗಳಿಗೆ ಸಂಬಂಧಿಸಿದ ಕುಂದುಕೊರತೆಗಳನ್ನು ಆಲಿಸುವ ಮತ್ತು ಪರಿಹರಿಸುವ ಗುರಿಯನ್ನು ಹೊಂದಿವೆ ಎಂದು ಅವರು ಹೇಳಿದರು.

# ಜಾರಿಗೆ ಸಂಪುಟದ ನಿರ್ಧಾರ

**(1ನೇ ಪುಟದಿಂದ)** ಕೃಷಿಯನ್ನಾಗಿ ಮಾರ್ಪಡಿಸುವುದು ಯೋಜನೆಯ ಮುಖ್ಯ ಉದ್ದೇಶ. ಈ ಸಾಲಿಗೆ ಯೋಜನೆಗೆ 200 ಕೋಟಿ ರೂ. ಅನುದಾನ ನೀಡಲಾಗುವುದು ಎಂದರು. ಮಳೆ ನೀರಿನ ಸಮರ್ಪಕ ಸಂಗ್ರಹಣೆ ಹಾಗೂ ಉಪಯುಕ್ತ ಬಳಕೆ ಮೂಲಕ ಉತ್ಪಾದಕತೆ ವೃದ್ಧಿಸಲಾಗುವುದು. ಕೃಷಿ ಆದಾಯ ಹೆಚ್ಚಳ ಮತ್ತು ಮಳೆ ನೀರು ವ್ಯರ್ಥವಾಗದಂತೆ ಆಯ್ದ ಸ್ಥಳಗಳಲ್ಲಿ ಕೃಷಿ ಹೊಂಡಗಳನ್ನು ನಿರ್ಮಿಸಿ ರಕ್ಷಣಾತ್ಮಕ ನೀರಾವರಿ ಒದಗಿಸುವುದು ಯೋಜನೆಯ ಪ್ರಮುಖ ಅಂಶಗಳು ಎಂದು ಹೇಳಿದರು.

# ವಿದ್ಯುತ್ ಯೋಜನೆಗೆ 15 ಸಾವಿರ ಕೋಟಿ ರೂ.ಒಪ್ಪಂದ

**(1ನೇ ಪುಟದಿಂದ)** ಅವರು ಒಪ್ಪಂದಕ್ಕೆ ಸಹಿ ಹಾಕಿದ್ದಾರೆ. ಈ ಒಪ್ಪಂದದ ಅನ್ವಯ ಉತ್ತರ ಕನ್ನಡದ ಕದ್ರ ಅಣೆಕಟ್ಟೆಯಲ್ಲಿ 100 ಎಂ.ಡಬ್ಲ್ಯೂ. ಸಾಮರ್ಥ್ಯದ ತೇಲುವ ಸೌರ ಘಟಕ ಸ್ಥಾಪಿಸಲಾಗುವುದು. ಶಿವಮೊಗ್ಗದ ವರಾಹಿಯಲ್ಲಿ 1,500 ಎಂ.ಡಬ್ಲ್ಯೂ. ಸಾಮರ್ಥ್ಯದ ವಿದ್ಯುತ್ ಘಟಕ ಸ್ಥಾಪಿಸಲಾಗುವುದು.

# ಸರ್ಕಾರಿ ವೈದ್ಯ ಚುನಾವಣೆಯಲ್ಲಿ ಸ್ಪರ್ಧಿಸಲು ಅವಕಾಶ

**(1ನೇ ಪುಟದಿಂದ)** ಅವಕಾಶ ಇರಬೇಕು ಎಂದು ಹೈಕೋರ್ಟ್ ಆದೇಶದಲ್ಲಿ ತಿಳಿಸಲಾಗಿದೆ.

ಸರ್ಕಾರಿ ವೈದ್ಯರೊಬ್ಬರು ಚುನಾವಣೆಗೆ ಸ್ಪರ್ಧಿಸಲು ಹಾಗೂ ಸೋತ ಸಂದರ್ಭದಲ್ಲಿ ಮತ್ತೆ ಉದ್ಯೋಗಕ್ಕೆ ಸೇರ್ಪಡೆಯಾಗಲು ಹೈಕೋರ್ಟ್ ಅನುಮತಿ ನೀಡಿದ ಮೊದಲ ಪ್ರಕರಣ ಇದಾಗಿದೆ ಎಂದು ಘೋಘ್ರ ಹೇಳಿದ್ದಾರೆ.

ಇದು ಮಹತ್ವದ ತೀರ್ಪಾಗಿದೆ. ಇದು ಇನ್ನಷ್ಟು ವೈದ್ಯರು ಚುನಾವಣೆಗೆ ಸ್ಪರ್ಧಿಸಲು ದಾರಿ ಮಾಡಿಕೊಡಲಿದೆ ಎಂದು ಘೋಘ್ರ ಹೇಳಿದ್ದಾರೆ.

**ಸೈಟ್ ಮಾರಾಟಕ್ಕೆ**
ಕಿರಣ್ ಭೂಸನೂರ್ (ಏಜೆಂಟ್)
98440 63409
97315 63409
ಗ್ಲಾಸ್ ಹೌಸ್ ಎದುರು ಮತ್ತು ಪಕ್ಕ
30x35 ಪೂರ್ವ (33 ಲಕ್ಷ)
40x60 ಉತ್ತರ (72 ಲಕ್ಷ)

**ಸೈಟ್ ಮಾರಾಟಕ್ಕೆ (KHB)**
ನೇರವಾಗಿ ರಿಜಿಸ್ಟರ್ ಪಾರ್ಟಿಯಿಂದ ವ್ಯಾಪಾರ
ಕರ್ನಾಟಕ ಗೃಹ ಮಂಡಳಿ (ಕಮರ್ಷಿಯಲ್ ಆಗುವಂತಹ) 120 ಅಡಿ ರಸ್ತೆಗೆ 50X80 ಉತ್ತರ, 40X40 ದಕ್ಷಿಣ, ಪಶ್ಚಿಮ ಕಾರ್ನರ್
ಕಿರಣ್ ಭೂಸನೂರ್ (ಏಜೆಂಟ್)
98440 63409, 97315 63409

**ಮನೆ ಬಾಡಿಗೆಗೆ ಇದೆ**
ಎಸ್.ಎಸ್. ಬಡಾವಣೆ, 5ನೇ ಕ್ರಾಸ್, ಶಾಮನೂರು ರಸ್ತೆ, ಬಾಪೂಜಿ ಬ್ಯಾಂಕ್ ಸಮುದಾಯ ಭವನದ ಹತ್ತಿರ 1ನೇ ಮಹಡಿಯಲ್ಲಿ ಕಾರ್ಪೊರೇಷನ್ ಮತ್ತು ಬೋರ್ ನೀರಿನ ಸೌಕರ್ಯವಿರುವ 3 BHK ಮನೆ ಬಾಡಿಗೆಗೆ ಇದೆ. (ಸಸ್ಯಹಾರಿಗಳಿಗೆ ಮಾತ್ರ)
ಮೊ. 95131-74397

**ಸೈಟುಗಳು ಮಾರಾಟಕ್ಕಿವೆ**
ಬನಶಂಕರಿ ಬಡಾವಣೆ ಡಾಲರ್ಸ್ ಕಾಲೋನಿ, ಶಿವ-ಪಾರ್ವತಿ ಸಿದ್ದವೀರಪ್ಪ ಹಾಗೂ ದಾವಣಗೆರೆ ಎಲ್ಲಾ ಬಡಾವಣೆಗಳ 30x40, 30x50, 40x60, 50x80, ಸೈಟುಗಳು ಯೋಗ್ಯ ಬೆಲೆಯಲ್ಲಿ ದೊರೆಯುತ್ತವೆ ಹಾಗೂ ಹೊಲಗಳಿಗೆ ಸಂಪರ್ಕಿಸಿ :
97315 12365

**ಟ್ಯಾಂಕ್ ಕ್ಲೀನಿಂಗ್**
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ.
ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
91132 85992

**ಮಳಿಗೆ ಬಾಡಿಗೆಗಿದೆ**
(ಹದಡಿ ರಸ್ತೆ, ತರಳಬಾಳು ಬಡಾವಣೆ) ಶಿವಕುಮಾರ ಸ್ವಾಮಿ ಬಡಾವಣೆ, 2ನೇ ಹಂತದ ಎದುರು, ನಮ್ಮೂರು ತಿಂಡಿ ಹೋಟೆಲ್ ಎದುರು, 2050 ಚ.ಅ.
96863 96992

**ಕೆಲಸಕ್ಕೆ ಬೇಕಾಗಿದ್ದಾರೆ**
ದಾವಣಗೆರೆ ಪಿ.ಬಿ. ರಸ್ತೆ ಆವರಗೆರೆ ಹತ್ತಿರ ರಿಲೈಯನ್ಸ್ ಪೆಟ್ರೋಲ್ ಬಂಕ್‌ನಲ್ಲಿ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ. ಸಂಪರ್ಕಿಸಿ
ಮೊ : 98441 00273

**ಬೇಕಾಗಿದ್ದಾರೆ**
ಮನ್ವಿತ ಎಂಟರ್‌ಪ್ರೈಸಸ್
ದಾವಣಗೆರೆ ಪಿ.ಬಿ. ರಸ್ತೆ
* ಅಂಗಡಿಯಲ್ಲಿ ಕೆಲಸ ಮಾಡುವವರು
* ಮಾರ್ಕೆಟಿಂಗ್ ಕಲೆಕ್ಷನ್
* ಆಟೋ ಡ್ರೈವರ್ ಬೇಕಾಗಿದ್ದಾರೆ.
9448046571, 7899337571

**ತಕ್ಷಣ ಬೇಕಾಗಿದ್ದಾರೆ**
ರಾಜ್ ಭವನ್ ಬಾರ್ & ರೆಸ್ಟೋರೆಂಟ್, ಹರಿಹರ
* ರೆಸ್ಟೋರೆಂಟ್ ಮ್ಯಾನೇಜರ್
* ಕುಕ್ಸ್
* ಬಿಲ್ಲಿಂಗ್ ಕಂಪ್ಯೂಟರ್ಸ್
* ಸಪ್ಲೈಯರ್ಸ್ ಕ್ಯಾಪ್ಟನ್ಸ್
ಅನುಭವವುಳ್ಳವರಿಗೆ ಆಕರ್ಷಕ ಸಂಬಳ.
99726 98591
94490 37488

**ಸಾಯಿಬಾಬಾ ಸರ್ವೀಸ್ ಡೀಲರ್**
ಹೋಲ್ ಸೇಲ್ ದರದಲ್ಲಿ ಫ್ರೀ ಡೆಲಿವರಿ ಸಿಮೆಂಟ್ ಸಿಗುತ್ತದೆ. (ಐವತ್ತು ಚೀಲಗಳ ಮೇಲೆ)
ಅಲ್ಟ್ರಾಟೆಕ್ ಪಿಪಿಸಿ - 390/-,
ಅಲ್ಟ್ರಾಟೆಕ್ ಸೂಪರ್ - 410/-,
ಮಾ ಪಿಪಿಸಿ - 330/-, ಮಾ 43 - 360/-,
ಜೆ.ಎಸ್. ಡಬ್ಲ್ಯೂ. ಪವರ್ ಫ್ಲೋ - 340/-,
ಜೆ.ಎಸ್. ಡಬ್ಲ್ಯೂ. ಕಾಫ್ ಕೆಮ್ - 365/-,
90190 75112, 73535 07622

**ಅಕ್ಷಯ ಬಂಗಾರದ ಆಭರಣ ತಯಾರಕರು**
ಜ್ಯುವೆಲರಿ ಅಂಗಡಿ ಅವರಿಗೆ ಬಹಳ ಕಡಿಮೆ ವೇಸ್ಟೇಜ್‌ನಲ್ಲಿ ಎಲ್ಲಾ ರೀತಿಯ ಆಭರಣಗಳನ್ನು ಕೇವಲ 2% ರಿಂದ 12% ನಲ್ಲಿ 3 ರಿಂದ 7 ದಿನದ ಒಳಗೆ ಯಾವುದೇ ಐಟಂ ಮಾಡಿ ಕೊಡಲಾಗುವುದು. ಸಂಪರ್ಕಿಸಿ :
72596 60786

**ಶಿವ ಸೈಬರ್ ಕೆಫೆ**
ಕನ್ನಡ ಮತ್ತು ಇಂಗ್ಲಿಷ್ ಟೈಪಿಂಗ್ ಮಾಡಲು ಹುಡುಗರು ಮತ್ತು ಹುಡುಗಿಯರು ಕೆಲಸಕ್ಕೆ ಬೇಕಾಗಿದ್ದಾರೆ.
98808 23450

**HOUSE FOR RENT**
(ಸಿಂಗಲ್ ಬೆಡ್ ರೂಂ)
1 BHK House
Vidyanagara Near Anjaneya Temple, Davangere.
98802 45006

**ಬೇಕಾಗಿದ್ದಾರೆ**
ಟೀ ಮತ್ತು ಜ್ಯೂಸ್ ಮಾಡಲು ಅನುಭವವುಳ್ಳ ಹುಡುಗರು ಬೇಕಾಗಿದ್ದಾರೆ.
87226 01100

**ಮನೆ ಕ್ಲೀನಿಂಗ್ ಮಾಡಿಕೊಡಲಾಗುವುದು**
ಮನೆ ಕ್ಲೀನಿಂಗ್ ಮತ್ತು ಹಳೆಮನೆ ಬಾಡಿಗೆ ಕೊಡುವ ಮನೆಗಳನ್ನು ಕ್ಲೀನಿಂಗ್ ಮಾಡಿಕೊಡಲಾಗುವುದು.
99863 61250
80730 24690

**2 BHK ಮನೆ ಬಾಡಿಗೆಗಿದೆ**
2ನೇ ಮಹಡಿ, ಪಿ.ಜೆ. ಬಡಾವಣೆ, 2ನೇ ಮೇನ್, 1ನೇ ಕ್ರಾಸ್, ರೈತರ ಬೀದಿ, ದಾವಣಗೆರೆ-2.
97405 69252

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ – ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
–ಜಾಹೀರಾತು ವ್ಯವಸ್ಥಾಪಕರು

**ತಕ್ಷಣ ಬೇಕಾಗಿದ್ದಾರೆ**
ಭತ್ತ ಕೊಯ್ಯುವ ಯಂತ್ರ ನೋಡಿಕೊಳ್ಳಲು SSLC & PUC ಓದಿರುವ ಹಿಂದಿ ಭಾಷೆಯುಳ್ಳ ಯುವಕರು ಬೇಕಾಗಿದ್ದಾರೆ. (ಸೂಪರ್ ವೈಸರ್) ಊಟ, ವಸತಿ ಆಕರ್ಷಕ ಸಂಬಳ ಕೊಡಲಾಗುವುದು.
94823 89317

**We Are Leading Interior, Acoustic Av Solutions Provider Needs**
1) Admin - Fresh Female Graduate with Computer
2) Male Marketing Executive
Interested & Ready to join on priority call \ send CV on
98800 38812 :Gururaj

**Admission Open For ಬಿಎಸ್ಸಿ ನರ್ಸಿಂಗ್**
TMAE SOCIETY'S
SCS INSTITUTE OF NURSING SCIENCES
ಹರಪನಹಳ್ಳಿ-583131
ಕೆಲವೇ ಸೀಟುಗಳು ಮಾತ್ರ,
9448080626, 9902378278
College : 9448026786, 9380131323

**ಬೇಕಾಗಿದ್ದಾರೆ**
ಸೆಲ್ಫ್ ಸರ್ವೀಸ್ ಹೋಟೆಲ್‌ನಲ್ಲಿ ಅಡುಗೆ ಮತ್ತು ಕೌಂಟರ್ ಸಪ್ಲೈ ಎರಡೂ ಕೆಲಸ ಗೊತ್ತಿರುವಂತಹ ಯುವಕರು ಫುಲ್ ಟೈಮ್ ಕೆಲಸಕ್ಕೆ ಬೇಕಾಗಿದ್ದಾರೆ.
95388 96927

**ಬಾಡಿಗೆಗಿದೆ**
ರಾಣೇಬೆನ್ನೂರು ನಗರದ ಮೆಡ್ಲೇರಿ ರಸ್ತೆಯಲ್ಲಿ ವೆಜ್-ನಾನ್ ವೆಜ್ ಗೆ ಸುಸಜ್ಜಿತವಾಗಿರುವ ಚೇತನಾ ಹೋಟೆಲ್ ಬಾಡಿಗೆಗಿದೆ. ಆಸಕ್ತರು ಸಂಪರ್ಕಿಸಿರಿ:
88670 57206

**ಗಲ್ಫಿ ಚಹಾ ಮಾರಾಟಕ್ಕಿದೆ (FRANCHISE)**
ವಿಳಾಸ : ಕೆ.ಆರ್. ರೋಡ್, ಜಗಳೂರು ಬಸ್ ಸ್ಟಾಪ್ ಎದುರು, ಗಣೇಶ ಗುಡಿ ಹತ್ತಿರ, ದಾವಣಗೆರೆ-577001, ಸಂಪರ್ಕಿಸಿ :
99026 29958
ಕಿರಣ್ ಕುಮಾರ ಬಿ.

**ಲೈಂಗಿಕ ನಿಶ್ಯಕ್ತಿಗೆ ನಿರಾಶರಾಗಬೇಡಿ**

ಶೀಘ್ರ ಸ್ಖಲನ, ಹಸ್ತ ಮೈಥುನ, ಸ್ವಪ್ನದೋಷ, ನರಗಳ ದೌರ್ಬಲ್ಯತೆ, ತಾರುಣ್ಯ ನಾಶ, ಸಂತಾನ ದೋಷ, ಲೈಂಗಿಕ ಸಮಸ್ಯೆಗೆ ಭೇಟಿಯಾಗಿ.
ದಾವಣಗೆರೆ : 2 & 3ರಂದು ಬಸವರಾಜ ಲಾಡ್ಜ್ ಪಿ.ಬಿ. ರಸ್ತೆ.
ಡಾ|| ಎಚ್.ಆಯ್. ದೊಡ್ಡಮನಿ (G.R.No.8969)
ದಮ್ಮಣಗಿ ಕಾಂಪ್ಲೆಕ್ಸ್, 1ನೇ ಮಹಡಿ, ನಂ.26 ಹಳೇಬಸ್ ಸ್ಟ್ಯಾಂಡ್ ಎದುರಿಗೆ, ಹುಬ್ಬಳ್ಳಿ
M:9740523710

**ಆಲೂರು ಚಂದ್ರಶೇಖರಪ್ಪ ಮೆಮೋರಿಯಲ್ ಆಸ್ಪತ್ರೆ & ಟ್ರಸ್ಟ್**
2ನೇ ಮೇನ್, ಕಾಲೇಜು ರಸ್ತೆ, ಪಿ.ಜೆ.ಬಡಾವಣೆ, ದಾವಣಗೆರೆ-2.
39ನೇ ವಿಶ್ವ ಮಧುಮೇಹ ದಿನಾಚರಣೆ ಪ್ರಯುಕ್ತ ಉಚಿತ ಆರೋಗ್ಯ ತಪಾಸಣೆ, ಸಲಹೆ
✦ ಸಕ್ಕರೆ ಕಾಯಿಲೆವುಳ್ಳವರಿಗೆ ಉಚಿತ ತಪಾಸಣೆ, ಚಿಕಿತ್ಸೆ
✦ ಥೈರಾಯಿಡ್ ಸಮಸ್ಯೆವುಳ್ಳವರಿಗೆ ಸಲಹೆ ಮತ್ತು ಚಿಕಿತ್ಸೆ
✦ ಬಂಜೆತನ ನಿವಾರಣೆಗೆ ಸಲಹೆ ಮತ್ತು ಚಿಕಿತ್ಸೆ
✦ ಸಕ್ಕರೆ ಕಾಯಿಲೆವುಳ್ಳವರಿಗೆ ಅವರ ಜೀವನ ಶೈಲಿ, ನೀತಿ, ನಿಯಮ ಹಾಗೂ ಆಹಾರ ಪದ್ಧತಿ ಬಗ್ಗೆ ಸೂಕ್ತ ಸಲಹೆ
✦ ಸಕ್ಕರೆ ಕಾಯಿಲೆವುಳ್ಳ ಮಕ್ಕಳಿಗೆ ಉಚಿತ ಇನ್ಸುಲಿನ್ ವಿತರಣೆ
ದಿನಾಂಕ : 12.11.2023ರ ಭಾನುವಾರ
ಸಮಯ : ಬೆಳಿಗ್ಗೆ 9 ರಿಂದ 1ರವರೆಗೆ,
ಸ್ಥಳ: ಆಲೂರು ಆಸ್ಪತ್ರೆ, 2ನೇ ಮೇನ್, ಕಾಲೇಜು ರಸ್ತೆ, ಪಿ.ಜೆ.ಬಡಾವಣೆ, ದಾವಣಗೆರೆ.
ಸರ್ವರಿಗೂ ಸುಸ್ವಾಗತ
ಮೊ. : 88677 75564

**ಸೆಕ್ಯೂರಿಟಿ ಗಾರ್ಡ್ ಬೇಕಾಗಿದ್ದಾರೆ**
ಊಟ ವಸತಿಯ ಸೌಲಭ್ಯವಿದೆ
ಸಂಬಳ-8000-12000
PH : +91 88845 95873
+91 87920 48458

**ಕೆಲಸಕ್ಕೆ ಬೇಕಾಗಿದ್ದಾರೆ**
ಟೀ ಹಾಗು ಕಾಫಿ ಮಾಡುವವರು ಬೇಕಾಗಿದ್ದಾರೆ.
ಸ್ಥಳ: 1946 ಪ್ರಕಾಶ್ ಕಾಫಿ ವರ್ಕ್ಸ್
ಮಾಮಸ್ ಜಾಯಿಂಟ್ ರೋಡ್ ಮತ್ತು
ಪ್ರಕಾಶ್ ಕಾಫಿ ವರ್ಕ್ಸ್
ವಿಜಯಲಕ್ಷ್ಮಿ ರಸ್ತೆ
99004 38052, 97401 53513

ಶ್ರೀ ಗುರು ಮರುಳಸಿದ್ದೇಶ್ವರ ಸ್ವಾಮಿ ಸೇವಾ ಸಂಸ್ಥೆ (ರಿ.)
**ಹಿಂದೂ ವಧು-ವರರ ಮಾಹಿತಿ ಕೇಂದ್ರ**
www.hindusmatrimony.com
ನಮ್ಮಲ್ಲಿ ಎಲ್ಲಾ ತರಹದ ಹಿಂದೂ ವಧು-ವರರಿಗಾಗಿ ಸಂಪರ್ಕಿಸಿ.
ವಿಳಾಸ : ಬಾಣಾಪುರಮಠ ಹಾಸ್ಪಿಟಲ್ ಎದುರು, 8ನೇ ಮೇನ್, ಪಿ.ಜೆ. ಬಡಾವಣೆ, ದಾವಣಗೆರೆ-2.
94481-59303, 94834 63783

**ಜಮೀನು ಮಾರಾಟಕ್ಕಿದೆ**
ಸೊಕ್ಕೆ ಹೋಬಳಿ-ಮಾಗಡಿ ಗ್ರಾಮದ ಸ.ನಂ.ನಲ್ಲಿರುವ 5 ಎಕರೆ ಕೆಂಪು ಮಣ್ಣಿನಿಂದ ಕೂಡಿರುವ ಜಮೀನು ಮಾರಾಟಕ್ಕಿದೆ.
91108 75944

**FIRST FLOOR SHOP FOR RENT**
Clothes Shop, Beauty Parlour, finance Office, CO-OP Bank, Mini Bank Etc., (With Wash Room Facility)
N. R. Road, DAVANGERE.
94483 69523

**ಉದ್ಯೋಗಾವಕಾಶಗಳು**
ದೇಶದ ನಂ. 1 ಕಂಪನಿಯೊಂದರಲ್ಲಿ 30 ವರ್ಷ ಮೇಲ್ಪಟ್ಟ PUC ಪಾಸಾದ ಅಭ್ಯರ್ಥಿಗಳಿಗೆ ಸುವರ್ಣಾವಕಾಶ ಆಕರ್ಷಕ ವೇತನ ಮತ್ತು ಭತ್ಯೆಗಳ ಸೌಲಭ್ಯವಿರುತ್ತದೆ. ಸಂಪರ್ಕಿಸಿ :
98807 29108

## ಸಂಕ್ಷಿಪ್ತ ಸುದ್ದಿ

**ಡಿ.4ರಿಂದ ಸಂಸತ್ ಅಧಿವೇಶನ**
ನವದೆಹಲಿ : ಸಂಸತ್ತಿನ ಚಳಿಗಾಲದ ಅಧಿವೇಶನ ಡಿಸೆಂಬರ್ 4ರಿಂದ ಆರಂಭವಾಗಲಿದ್ದು, ಡಿಸೆಂಬರ್ 22ರವರೆಗೆ ಮುಂದುವರೆಯಲಿದೆ ಎಂದು ಸಂಸದೀಯ ವ್ಯವಹಾರಗಳ ಸಚಿವ ಪ್ರಹ್ಲಾದ್ ಜೋಷಿ ತಿಳಿಸಿದ್ದಾರೆ. ಐ.ಪಿ.ಸಿ., ಸಿ.ಆರ್.ಪಿ.ಸಿ. ಹಾಗೂ ಸಾಕ್ಷ್ಯ ಕಾಯ್ದೆಗಳ ಜಾಗದಲ್ಲಿ ಹೊಸ ಮಸೂದೆಗಳನ್ನು ಈ ಅಧಿವೇಶನದಲ್ಲಿ ಮಂಡಿಸುವ ನಿರೀಕ್ಷೆ ಇದೆ.

**ಡಿ.4ರಿಂದ ವಿಧಾನ ಮಂಡಲದ ಅಧಿವೇಶನ**
ಬೆಂಗಳೂರು: ಬೆಳಗಾವಿಯ ಸುವರ್ಣ ಸೌಧದಲ್ಲಿ ಡಿಸೆಂಬರ್ 4 ರಿಂದ 15ರ ವರೆಗೆ 10 ದಿನಗಳ ಕಾಲ ಚಳಿಗಾಲದ ಅಧಿವೇಶನ ನಡೆಸಲು ಗುರುವಾರ ನಡೆದ ರಾಜ್ಯ ಸಚಿವ ಸಂಪುಟ ಸಭೆಯಲ್ಲಿ ತೀರ್ಮಾನಿಸಲಾಗಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ನೇತೃತ್ವದಲ್ಲಿ ನಡೆದ ಸಚಿವ ಸಂಪುಟ ಸಭೆಯಲ್ಲಿ ಈ ಬಗ್ಗೆ ನಿರ್ಧಾರ ತೆಗೆದುಕೊಳ್ಳಲಾಗಿದೆ.

**ಸುಪ್ರೀಂ ಕೋರ್ಟ್ ನ್ಯಾಯಮೂರ್ತಿಗಳಾಗಿ ಮೂವರು ಪ್ರಮಾಣ ವಚನ**
ನವದೆಹಲಿ : ಸುಪ್ರೀಂ ಕೋರ್ಟ್ ನ್ಯಾಯಮೂರ್ತಿಗಳಾಗಿ ಸತೀಶ್ ಚಂದ್ರ ಶರ್ಮ, ಆಗಸ್ಟೀನ್ ಜಾರ್ಜ್ ಹಾಗೂ ಸಂದೀಪ್ ಮೆಹ್ತಾ ಅವರು ಪ್ರಮಾಣ ವಚನ ಸ್ವೀಕರಿಸಿದ್ದಾರೆ. ಇದರಿಂದಾಗಿ ಸುಪ್ರೀಂ ಕೋರ್ಟ್ 34 ಸದಸ್ಯರ ಪೂರ್ಣ ಬಲ ಪಡೆದುಕೊಂಡಿದೆ. ಪ್ರಮಾಣ ವಚನ ಸ್ವೀಕರಿಸಿದ ಮೂವರೂ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿಗಳಾಗಿದ್ದಾರೆ.

**ಭಾರತೀಯರಿಗೆ ಮರಣ ದಂಡನೆ ವಿರುದ್ಧ ಮೇಲ್ಮನವಿ**
ನವದೆಹಲಿ : ಭಾರತೀಯ ನೌಕಾ ದಳದ ಎಂಟು ಮಾಜಿ ಸಿಬ್ಬಂದಿಗೆ ಕತಾರ್ ನ್ಯಾಯಾಲಯ ಮರಣ ದಂಡನೆ ವಿಧಿಸಿರುವುದರ ವಿರುದ್ಧ ಮೇಲ್ಮನವಿ ಸಲ್ಲಿಸಲಾಗಿದೆ ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯ ತಿಳಿಸಿದೆ.

**ಜಾರಿ ನಿರ್ದೇಶನಾಲಯದ ಎದುರು ಬ್ಯಾನರ್ಜಿ ಹಾಜರಿ**
ಕೊಲ್ಕೊತಾ : ಪಶ್ಚಿಮ ಬಂಗಾಳದ ಶಾಲಾ ನೇಮಕಾತಿ ಹಗರಣಕ್ಕೆ ಸಂಬಂಧಿಸಿದಂತೆ ತೃಣಮೂಲ ಕಾಂಗ್ರೆಸ್ ಸಂಸದ ಅಭಿಷೇಕ್ ಬ್ಯಾನರ್ಜಿ ಅವರು ಜಾರಿ ನಿರ್ದೇಶನಾಲಯದ ಎದುರು ಹಾಜರಾಗಿದ್ದಾರೆ. ತನಿಖೆಗೆ ಸಂಬಂಧಿಸಿದಂತೆ ಕೇಳಲಾದ ಪ್ರಶ್ನೆಗಳಿಗೆ ಉತ್ತರ ಸಲ್ಲಿಸಿದ್ದಾರೆ. ಈ ಉತ್ತರಗಳಿಗೆ ಪೂರಕವಾಗಿ 6 ಸಾವಿರ ಪುಟಗಳ ದಾಖಲೆಗಳನ್ನೂ ಸಲ್ಲಿಸಿದ್ದಾರೆ.

**ಪೆರಿಯಾರ್ ಪ್ರತಿಮೆ ತೆರವು ಚುನಾವಣಾ ವಿಷಯ : ಅಣ್ಣಾಮಲೈ**
ಚೆನ್ನೈ : ದೇವಾಲಯಗಳ ಬಳಿ ಪೆರಿಯಾರ್ ಪ್ರತಿಮೆಗಳನ್ನು ಸ್ಥಾಪಿಸಿರುವುದನ್ನು ತೆರವುಗೊಳಿಸುವುದು ಬಿಜೆಪಿಯ ನಿಲುವಾಗಿದೆ. ಇದು ಚುನಾವಣಾ ವಿಷಯವೂ ಆಗಲಿದೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಕೆ. ಅಣ್ಣಾಮಲೈ ಹೇಳಿದ್ದಾರೆ.

**ಭಾರತವನ್ನು ಸುರಕ್ಷಿತ ದೇಶದ ಪಟ್ಟಿಗೆ ಸೇರಿಸಲಿರುವ ಬ್ರಿಟನ್**
ಲಂಡನ್ : ಭಾರತವನ್ನು ಸುರಕ್ಷಿತ ದೇಶಗಳ ಪಟ್ಟಿಗೆ ಸೇರ್ಪಡೆ ಮಾಡಲು ಬ್ರಿಟನ್ ಸರ್ಕಾರ ಮುಂದಾಗಿದೆ. ಇದರಿಂದಾಗಿ ಬ್ರಿಟನ್‌ಗೆ ಅಕ್ರಮವಾಗಿ ಪ್ರಯಾಣಿಸುವವರನ್ನು ಭಾರತಕ್ಕೆ ಹಸ್ತಾಂತರಿಸುವ ಪ್ರಕ್ರಿಯೆ ವೇಗ ಪಡೆದುಕೊಳ್ಳಲಿದೆ. ಬ್ರಿಟನ್‌ನಲ್ಲಿ ಆಶ್ರಯ ಪಡೆದುಕೊಳ್ಳುವ ಅವಕಾಶವೂ ತಪ್ಪಲಿದೆ.

**ಮಾಲಿನ್ಯ ನಿಯಂತ್ರಣಕ್ಕಾಗಿ ಕೃತಕ ಮಳೆ, ದೆಹಲಿ ಸರ್ಕಾರದ ಪ್ರಸ್ತಾಪ**
ನವದೆಹಲಿ : ವಾಯು ಮಾಲಿನ್ಯ ನಿವಾರಣೆಗಾಗಿ ಕೃತಕ ಮಳೆ ಪ್ರಯತ್ನಕ್ಕೆ ಮುಂದಾಗಲು ದೆಹಲಿ ಸರ್ಕಾರ ನಿರ್ಧರಿಸಿದೆ. ಮುಖ್ಯ ಕಾರ್ಯದರ್ಶಿ ಈ ಕುರಿತ ಪ್ರಸ್ತಾಪವನ್ನು ಸುಪ್ರೀಂ ಕೋರ್ಟ್ ಎದುರು ಮಂಡಿಸಲಿದ್ದಾರೆ. ನವೆಂಬರ್ 20ರಂದು ಮೊದಲ ಹಂತದ ಕೃತಕ ಮಳೆಗೆ ಪ್ರಯತ್ನ ನಡೆಸಲು ಪ್ರಸ್ತಾಪಿಸಲಾಗಿದೆ.

## ಇಂದು 'ಟೆಕ್ನೋವಾ-2k23, ಕನ್ನಡ ರಾಜ್ಯೋತ್ಸವ, ಘಟಿಕೋತ್ಸವ

ದಾವಣಗೆರೆ, ನ. 9- ನಗರದ ಜೆ.ಹೆಚ್. ಪಟೇಲ್ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ಅಂಡ್ ಟೆಕ್ನಾಲಜಿ ವತಿಯಿಂದ ನಾಳೆ ದಿನಾಂಕ 10 ರ ಶುಕ್ರವಾರ ಬೆಳಿಗ್ಗೆ 10 ಕ್ಕೆ ಜೆ.ಹೆಚ್. ಪಟೇಲ್ ಕ್ಯಾಂಪಸ್‌ನಲ್ಲಿ ಟೆಕ್ನೋವಾ-2ಕೆ 23, ಕನ್ನಡ ರಾಜ್ಯೋತ್ಸವ, ಕಾಲೇಜು ಘಟಿಕೋತ್ಸವ, ತಾಂತ್ರಿಕ ಉತ್ಸವ ಜರುಗಲಿದೆ ಎಂದು ಪ್ರಾಚಾರ್ಯರಾದ ಜಿ.ಟಿ. ಅಶ್ವಿನಿ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ವಿದ್ಯಾಸಂಸ್ಥೆ ಅಧ್ಯಕ್ಷೆ ಷಹನಾಜ್‌ಬೀ ಅಧ್ಯಕ್ಷತೆ ವಹಿಸುವರು. ಮುಖ್ಯ ಅತಿಥಿಗಳಾಗಿ ಮಹಾನಗರ ಪಾಲಿಕೆ ಮಾಜಿ ಸದಸ್ಯ ದಿನೇಶ್ ಕೆ. ಶೆಟ್ಟಿ, ಕನ್ನಡ ಚಳವಳಿ ಕೇಂದ್ರ ಸಮಿತಿ ರಾಜ್ಯ ಉಪಾಧ್ಯಕ್ಷ ಟಿ. ಶಿವಕುಮಾರ್ ಮತ್ತಿತರರು ಭಾಗವಹಿಸಲಿದ್ದಾರೆ.

ಈ ವರ್ಷ ಪದವಿ ಪೂರ್ಣಗೊಳಿಸಿದ ವಿದ್ಯಾರ್ಥಿಗಳಿಗೆ ಘಟಿಕೋತ್ಸವ ದಲ್ಲಿ ಪದವಿ ಪ್ರದಾನ ಮಾಡಲಾಗುವುದು. ಅಂತರ ಕಾಲೇಜು ಮಟ್ಟದ ತಾಂತ್ರಿಕ ಉತ್ಸವವನ್ನು ನಡೆಸಲಿದ್ದು, ಉತ್ಸವದಲ್ಲಿ ಬೆಸ್ಟ್ ಟೆಕ್ಕಿ ಅವಾರ್ಡ್, ಬೆಸ್ಟ್ ಪೇಪರ್ ಪ್ರಸೆಂಟೇಶನ್, ಬೆಸ್ಟ್ ಇನ್ನೋವೇಟಿವ್ ಐಡಿಯಾ ಈ ಮೂರೂ ಅವಾರ್ಡ್‌ಗಳನ್ನು ನೀಡಲಾಗುವುದು ಎಂದು ಮಾಹಿತಿ ನೀಡಿದರು. ಸುಮಾರು 150 ಕ್ಕೂ ಹೆಚ್ಚು ವಿದ್ಯಾರ್ಥಿಗಳು ನೋಂದಾಯಿಸಿಕೊಂಡಿದ್ದಾರೆಂದು ಹೇಳಿದರು.

ಸುದ್ದಿಗೋಷ್ಠಿಯಲ್ಲಿ ವಿದ್ಯಾಸಂಸ್ಥೆಯ ಕಾರ್ಯದರ್ಶಿ ಮುಸ್ತಾಫಾ, ವಿದ್ಯಾರ್ಥಿಗಳಾದ ಎಂ. ಭುವನ್, ಹೆಚ್. ವೀರೇಶ್ವರ್, ಬಿ.ಕೆ. ಉಲ್ಲಾಸ್, ಇ. ರಾಧಿಕಾ, ಡಿ.ಪಿ. ಲೇಖನ, ಹೆಚ್.ವಿ. ಹಂಸ ಉಪಸ್ಥಿತರಿದ್ದರು.

## ಪತ್ರಿಕಾ ವಿತರಕ ಕೃಷ್ಣಮೂರ್ತಿ ಪುತ್ರಿಗೆ ಪ್ರತಿಭೋತ್ಸವದಲ್ಲಿ ಗೌರವ



ದಾವಣಗೆರೆ, ನ. 9- ಬೆಂಗಳೂರಿನ ಮಹಾಲಕ್ಷ್ಮೀ ಲೇಔಟ್‌ನ ರಾಣಿ ಅಬ್ಬಕ್ಕ ಮೈದಾನದಲ್ಲಿ ಕರ್ನಾಟಕ ಆರ್ಯವೈಶ್ಯ ಮಹಾಸಭಾದಿಂದ ನಡೆದ 13ನೇ ಪ್ರತಿಭೋತ್ಸವದಲ್ಲಿ ನಗರದ ಹಿರಿಯ ಪತ್ರಿಕಾ ವಿತರಕ ಎ.ಎನ್. ಕೃಷ್ಣಮೂರ್ತಿ ಅವರ ಪುತ್ರಿ ಕೆ. ಮಧುರ ಅವರನ್ನು ಮಹಾಸಭಾದ ರಾಜ್ಯ ಅಧ್ಯಕ್ಷ ಆರ್.ಪಿ. ರವಿಶಂಕರ್ ಗೌರವಿಸಿದರು.

BAMS
Bachelor of Ayurvedic Medicine & Surgery
MD Doctor of Medicine | MS Master of Surgery
ನೇರ ಪ್ರವೇಶ DIRECT ADMISSION
NEET MARKS REDUCED TO
GM-45PERCENTILE, SC/ST/OBC-35 PERCENTILE
WEBSITE: www.kea.kar.nic.in
Admission includes Hostel and Food Facility
34 Years in Ayurveda Education
ASHWINI ID NO.I710
AYURVEDIC MEDICAL COLLEGE & P.G.CENTRE
ಅಶ್ವಿನಿ ಆಯುರ್ವೇದಿಕ ಮೆಡಿಕಲ್ ಕಾಲೇಜ್ ಮತ್ತು ಪಿ.ಜಿ. ಸೆಂಟರ್, ದಾವಣಗೆರೆ
P.B Road, Opp. Bathi Lake, DAVANGERE
KARNATAKA • www.amcdvg.com
9972825838 • 9449823088 • 9886840212

## ನಾಳೆ-ನಾಡಿದ್ದು ರಾಜ್ಯಮಟ್ಟದ ಖೋ-ಖೋ ಪಂದ್ಯಾವಳಿ

ದಾವಣಗೆರೆ, ನ. 9- ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ, ಪದವಿ ಪೂರ್ವ ಶಿಕ್ಷಣ ಇಲಾಖೆ ಉಪ ನಿರ್ದೇಶಕರ ಕಚೇರಿ ಮತ್ತು ಶ್ರೀ ಸಿದ್ಧಗಂಗಾ ಪದವಿ ಪೂರ್ವ ಕಾಲೇಜು ಸಂಯುಕ್ತಾಶ್ರಯದಲ್ಲಿ 2023-24 ನೇ ಸಾಲಿನ ಪದವಿ ಪೂರ್ವ ಕಾಲೇಜುಗಳ ರಾಜ್ಯಮಟ್ಟದ ಖೋ-ಖೋ ಪಂದ್ಯಾವಳಿ ನಾಡಿದ್ದು ದಿನಾಂಕ 11 ಹಾಗೂ 12 ರಂದು ಎರಡು ದಿನಗಳ ಕಾಲ ಜಿಲ್ಲಾ ಕ್ರೀಡಾಂಗಣದಲ್ಲಿ ನಡೆಯಲಿದೆ ಎಂದು ಪದವಿ ಪೂರ್ವ ಶಿಕ್ಷಣ ಇಲಾಖೆ ಉಪನಿರ್ದೇಶಕ ಎಸ್.ಜಿ. ಕರಿಸಿದ್ಧಪ್ಪ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ದಿನಾಂಕ 11 ರಂದು ಬೆಳಿಗ್ಗೆ 10 ಕ್ಕೆ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಪಂದ್ಯಾವಳಿಗೆ ಚಾಲನೆ ನೀಡಲಿದ್ದಾರೆ. ಶಾಸಕ ಡಾ. ಶಾಮನೂರು ಶಿವಶಂಕರಪ್ಪ ಅಧ್ಯಕ್ಷತೆ ವಹಿಸಲಿದ್ದಾರೆ ಎಂದರು. ಮುಖ್ಯ ಅತಿಥಿಗಳಾಗಿ ಸಂಸದ ಜಿ.ಎಂ. ಸಿದ್ಧೇಶ್ವರ ಸೇರಿದಂತೆ ಜನಪ್ರತಿನಿಧಿಗಳು, ಜಿಲ್ಲಾಮಟ್ಟದ ಅಧಿಕಾರಿಗಳು, ಪಾಲಿಕೆ ಆಯುಕ್ತರು, ಶಿಕ್ಷಣ ಇಲಾಖೆ ನಿರ್ದೇಶಕರು ಆಗಮಿಸಲಿದ್ದಾರೆಂದು ಮಾಹಿತಿ ನೀಡಿದರು.

ಈ ಪಂದ್ಯಾವಳಿಗೆ ರಾಜ್ಯದ 33 ಜಿಲ್ಲೆಗಳಿಂದ 396 ಬಾಲಕಿಯರು, 396 ಬಾಲಕರು ಮತ್ತು ಪ್ರತಿ ಜಿಲ್ಲಾ ತಂಡದಿಂದ 66 ಟೀಂ ಮ್ಯಾನೇಜರ್‌ಗಳು ಆಗಮಿಸಲಿದ್ದಾರೆ ಎಂದರು.

ನ. 10 ರ ಸಂಜೆಯೊಳಗೆ ವಿವಿಧ ಜಿಲ್ಲೆಗಳಿಂದ ಆಗಮಿಸುವ ಬಾಲಕರಿಗೆ ನಗರದ ಬಾಲಕರ ಸರ್ಕಾರಿ ಪ್ರೌಢಶಾಲೆ, ಸೀತಮ್ಮ ಕಾಲೇಜು, ಮೋತಿ ವೀರಪ್ಪ ಕಾಲೇಜುಗಳಲ್ಲಿ ವಸತಿ ಸೌಕರ್ಯ ಕಲ್ಪಿಸಲಾಗಿದೆ. ಎಲ್ಲಾ ಜಿಲ್ಲೆಗಳ ಬಾಲಕಿಯರಿಗೆ ಸಂಪೂರ್ಣವಾಗಿ ಸಿದ್ಧಗಂಗಾ ಕಾಲೇಜಿನಲ್ಲಿ ವಸತಿ ಸೌಲಭ್ಯ ಕಲ್ಪಿಸಲಾಗಿದೆ ಎಂದು ಮಾಹಿತಿ ನೀಡಿದರು.

ಸುದ್ದಿಗೋಷ್ಠಿಯಲ್ಲಿ ಜಸ್ಟಿನ್ ಡಿಸೋಜ, ಡಾ. ಡಿ.ಎಸ್. ಜಯಂತ್, ಡಿ.ಎಸ್. ಹೇಮಂತ್, ಶಿವಪ್ಪ, ಕುಮಾರ್ ನಾಯ್ಕ, ಪ್ರದೀಪ್, ಶೇಖರಪ್ಪ ಉಪಸ್ಥಿತರಿದ್ದರು.

## ನಾಳೆ ಒನಕೆ ಓಬವ್ವ ಜಯಂತಿ

ದಾವಣಗೆರೆ, ನ. 9- ಜಿಲ್ಲಾಡಳಿತದಿಂದ ನಾಡಿದ್ದು ದಿನಾಂಕ 11 ರ ಶನಿವಾರ ಬೆಳಿಗ್ಗೆ 11 ಗಂಟೆಗೆ ಜಿಲ್ಲಾಡಳಿತ ಭವನದ ತುಂಗಭದ್ರಾ ಸಭಾಂಗಣದಲ್ಲಿ ವೀರ ವನಿತೆ ಒನಕೆ ಓಬವ್ವ ಜಯಂತಿ ಆಚರಣೆಯನ್ನು ಹಮ್ಮಿಕೊಳ್ಳಲಾಗಿದೆ ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ರವಿಚಂದ್ರ ತಿಳಿಸಿದ್ದಾರೆ.

# ಕೃಷಿ ವಿಜ್ಞಾನ ಕೇಂದ್ರದಲ್ಲಿ ವಿಶ್ವ ಆಹಾರ ದಿನಾಚರಣೆ




ದಾವಣಗೆರೆ, ನ. 9 - ನೀರೇ ಜೀವ, ನೀರೇ ಆಹಾರ. ಇದರಿಂದ ಯಾರೂ ವಂಚಿತರಾಗಬಾರದು ಎಂಬ ಈ ವರ್ಷದ ವಿಶ್ವ ಆಹಾರ ದಿನಾಚರಣೆಯ ಧ್ಯೇಯ ವಾಕ್ಯದೊಂದಿಗೆ ಐಸಿಎಆರ್-ತರಳಬಾಳು ಕೃಷಿ ವಿಜ್ಞಾನ ಕೇಂದ್ರದಲ್ಲಿ ವಿಶ್ವ ಆಹಾರ ದಿನಾಚರಣೆಯನ್ನು ಆಚರಿಸಲಾಯಿತು.

ತರಳಬಾಳು ಕೃಷಿ ವಿಜ್ಞಾನ ಕೇಂದ್ರದ ಹಿರಿಯ ವಿಜ್ಞಾನಿಗಳು ಮತ್ತು ಮುಖ್ಯಸ್ಥ ಡಾ. ಟಿ.ಎನ್. ದೇವರಾಜ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿ, ಪ್ರತಿದಿನ ನಾವುಗಳು ಸೇವಿಸುವ ಆಹಾರದಲ್ಲಿ ಅನೇಕ ಕಲಬೆರೆಕೆಗಳು ಮತ್ತು ಪೀಡೆನಾಶಕ ಅಂಶಗಳು ಸೇರುತ್ತಿರುವುದು ಕ್ಯಾನ್ಸರ್ ಮತ್ತು ಇನ್ನಿತರೆ ರೋಗಗಳಿಗೆ ಪ್ರಮುಖ ಕಾರಣವಾಗಿದೆ. ನಾವು ಪ್ರತಿ ದಿನ ಉತ್ತಮವಾದ ಆಹಾರ ಸೇವನೆ ಮಾಡಬೇಕಾಗಿದ್ದು ಆಹಾರದಿಂದ ಆರೋಗ್ಯ, ಆರೋಗ್ಯದಿಂದ ಆದಾಯ ಎಂಬುದನ್ನು ಮನವರಿಕೆ ಮಾಡಿಕೊಳ್ಳುವ ಅವಶ್ಯಕತೆಯಿದೆ ಎಂದು ಅಭಿಪ್ರಾಯಪಟ್ಟರು.

ಕಾರ್ಯಕ್ರಮದಲ್ಲಿ ಭಾಗವಹಿಸಿದ ವಿದ್ಯಾರ್ಥಿಗಳನ್ನು ಕುರಿತು ಆಹಾರದ ಉತ್ಪಾದನೆ ಹಾಗೂ ನಿರ್ವಹಣೆ ಎಂಬ ವಿಷಯ ಮಂಡನೆ ಮಾಡಿದರು. ಪ್ರತಿ ದಿನ ನಾವು ವಿಷಯುಕ್ತ ಆಹಾರ ಸೇವನೆಗೆ ಕಾರಣವಾಗುವ ಅಂಶಗಳ ಕುರಿತು ಬೆಳಕು ಚೆಲ್ಲಿದರು.

ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಧ್ಯಾಪಕ ಡಾ. ನಟರಾಜ್ ಕಾರ್ಯಕ್ರಮದ ಉದ್ಘಾಟನೆ ಮಾಡಿ ಮಾತನಾಡುತ್ತಾ, ಮೂಲಭೂತ ಸೌಕರ್ಯಗಳನ್ನು ಬಹಳ ಜಾಗರೂಕತೆಯಿಂದ ಉಪಯೋಗ ಮಾಡುವ ಅವಶ್ಯಕತೆಯಿದ್ದು, ಅವುಗಳನ್ನು ಉಳಿಸಿ, ಮುಂದಿನ ಪೀಳಿಗೆಗೆ ನೀಡುವ ಮಹತ್ತರ ಜವಾಬ್ದಾರಿ ನಮ್ಮ ನಿಮ್ಮೆಲ್ಲರ ಮೇಲಿದೆ ಎಂದು ತಿಳಿಸಿದರು.

ಕೇಂದ್ರದ ತೋಟಗಾರಿಕೆ ತಜ್ಞ ಎಂ.ಜಿ. ಬಸವನಗೌಡ ತಮ್ಮ ಪ್ರಾಸ್ತಾವಿಕ ನುಡಿಯಲ್ಲಿ ನೀರಿನ ಪ್ರಾಮುಖ್ಯತೆ ಮತ್ತು ಅದರ ಸದುಪಯೋಗ ಮಾಡಿಕೊಳ್ಳುವ ಬಗ್ಗೆ ಮಾಹಿತಿ ನೀಡಿದರು.

ಕಾರ್ಯಕ್ರಮದಲ್ಲಿ ಪ್ರಗತಿಪರ ಕೃಷಿ ಮಹಿಳೆ ಶ್ರೀಮತಿ ಸರೋಜ ಎನ್. ಪಾಟೀಲ್ ಸಿರಿಧಾನ್ಯಗಳ ಮೌಲ್ಯವರ್ಧನೆ ಬಗ್ಗೆ ಮತ್ತು ಎಸ್. ಮಂಜುನಾಥ ಶುದ್ಧ ಗಾಣದ ಎಣ್ಣೆಯ ಉದ್ಯಮದ ಬಗ್ಗೆ ಕುರಿತು ವಿದ್ಯಾರ್ಥಿ ಗಳೊಂದಿಗೆ ತಮ್ಮ ಅನುಭವ ಹಂಚಿಕೊಂಡರು.

ಡಾ. ಕೆ.ವಿ. ಲೋಲಾಕ್ಷಿ, ಕೇಂದ್ರದ ಸಸ್ಯ ಸಂರಕ್ಷಣೆ ವಿಜ್ಞಾನಿಗಳಾದ ಡಾ. ಟಿ.ಜಿ. ಅವಿನಾಶ್ ಮಾತನಾಡಿದರು. ವಿಶ್ವ ಆಹಾರ ದಿನಾಚರಣೆಯ ಅಂಗವಾಗಿ ಆಧುನಿಕ ಮಾನವನ ಜೀವನದಲ್ಲಿ ನೀರಿನ ಮಹತ್ವ ಎಂಬ ವಿಷಯ ಕುರಿತು, ವಿದ್ಯಾರ್ಥಿಗಳಿಗೆ ಪ್ರಬಂಧ ಸ್ಪರ್ಧೆ ಏರ್ಪಡಿಸಲಾಗಿತ್ತು. ವಿಜೇತ ವಿದ್ಯಾರ್ಥಿಗಳಿಗೆ ಬಹುಮಾನ ವಿತರಣೆ ಮಾಡಲಾಯಿತು.

ಕು. ವಾಣಿ, ಕಾರ್ಯಕ್ರಮದಲ್ಲಿ ಕೃಷಿ ವಿಜ್ಞಾನ ಕೇಂದ್ರದ ಎಲ್ಲಾ ಸಿಬ್ಬಂದಿಗಳು ಮತ್ತು ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಪ್ರಾಧ್ಯಾಪಕರುಗಳು ಭಾಗವಹಿಸಿದ್ದರು.

## ಮಳೆ : ಮಲೇಬೆನ್ನೂರು ಹೋಬಳಿಯಲ್ಲಿ ನೆಲ ಕಚ್ಚಿದ ಭತ್ತ



ಮಲೇಬೆನ್ನೂರು, ನ. 9 - ಬುಧವಾರ ಸುರಿದ ಮಳೆಯಿಂದಾಗಿ ಮಲೇಬೆನ್ನೂರು ಹೋಬಳಿಯಲ್ಲಿ ನೂರಾರು ಎಕರೆ ಭತ್ತದ ಬೆಳೆ ನೆಲಕಚ್ಚಿದೆ. ಕಂಭತ್ತನ ಹಳ್ಳಿಯಲ್ಲಿ 30 ಎಕರೆ, ಹುಲುಗಿನ ಹೊಳೆಯಲ್ಲಿ 15 ಎಕರೆ, ಎಳೆ ಹೊಳೆಯಲ್ಲಿ 20 ಎಕರೆ, ಧೂಳೆಯಲ್ಲಿ 30 ಎಕರೆ, ಇಂಗಳ ಗೊಂದಿಯಲ್ಲಿ 20 ಎಕರೆ, ವಾಸನದಲ್ಲಿ 25 ಎಕರೆ, ಉಕ್ಕಡಗಾತ್ರಿಯಲ್ಲಿ 15 ಎಕರೆ ಮತ್ತು ಕುಣೆಬೆಳಕೆರೆಯಲ್ಲಿ 30 ಎಕರೆ ಭತ್ತದ ಬೆಳೆ ನೆಲಕಚ್ಚಿದೆ ಎಂದು ವರದಿಯಾಗಿದೆ. ಮಳೆಯಿಂದ ಭತ್ತದ ಬೆಳೆಗೆ ಹಾನಿಯಾಗಿರುವ ಸ್ಥಳಗಳಿಗೆ ಭೇಟಿ ನೀಡಿ ವರದಿ ನೀಡುವಂತೆ ಗ್ರಾಮ ಲೆಕ್ಕಾಧಿಕಾರಿಗಳಿಗೆ ಸೂಚನೆ ನೀಡಿದ್ದು, ಆ ಪ್ರಕಾರ ಅವರುಗಳು ಈಗಾಗಲೇ ಬೆಳೆ ಹಾನಿ ಸ್ಥಳ ಪರಿಶೀಲನೆ ಮಾಡಿದ್ದಾರೆ ಎಂದು ಉಪ ತಹಶೀಲ್ದಾರ್ ಆರ್. ರವಿ 'ಜನತಾವಾಣಿ'ಗೆ ತಿಳಿಸಿದರು. ಮನೆಗಳಿಗೆ ಹಾನಿಯಾಗಿರುವ ಬಗ್ಗೆ ವರದಿಯಾಗಿಲ್ಲ

## ಇಂದು ಕುಕ್ಕುವಾಡೇಶ್ವರಿ ದೇವಿಯ ಮೂರ್ತಿ ಪ್ರತಿಷ್ಠಾಪನೆ

ದಾವಣಗೆರೆ ತಾಲ್ಲೂಕಿನ ಗೊಲ್ಲರಹಳ್ಳಿಯ ಶ್ರೀ ಕುಕ್ಕುವಾಡೇಶ್ವರಿ ದೇವಿಯ ಮೂರ್ತಿ ಪ್ರತಿಷ್ಠಾಪನೆ, ಕಳಸಾರೋಹಣ ಮತ್ತು ದೇವಸ್ಥಾನದ ಉದ್ಘಾಟನಾ ಸಮಾರಂಭವು ಇಂದು ನಡೆಯಲಿದೆ.

ಇಂದು ಬೆಳಿಗ್ಗೆ 7.30 ರಿಂದ ದೇವತಾಮೂರ್ತಿಯ ಪ್ರತಿಷ್ಠಾಪನೆ, ಬೆಳಿಗ್ಗೆ 10 ಗಂಟೆಗೆ ಕಳಸಾರೋಹಣ ನಡೆಯಲಿದ್ದು, ಕಾರ್ಯಕ್ರಮದ ದಿವ್ಯ ಸಾನ್ನಿಧ್ಯವನ್ನು ವಾಲ್ಮೀಕಿ ಗುರುಪೀಠದ ಶ್ರೀ ಪ್ರಸನ್ನಾನಂದಪುರಿ ಸ್ವಾಮೀಜಿ ಮತ್ತು ಅಧ್ಯಕ್ಷತೆಯನ್ನು ಬಿಜೆಪಿ ಜಿಲ್ಲಾ ಉಪಾಧ್ಯಕ್ಷ ಶ್ರೀನಿವಾಸ ದಾಸಕರಿಯಪ್ಪ ವಹಿಸುವರು.

ಮಾಯಕೊಂಡ ಶಾಸಕ ಕೆ.ಎಸ್. ಬಸವಂತಪ್ಪ ಉದ್ಘಾಟನೆ ನೆರವೇರಿಸಲಿದ್ದು, ಮಾಜಿ ಶಾಸಕ ಎಸ್.ವಿ ರಾಮಚಂದ್ರ, ಗೋ ಸಂರಕ್ಷಣಾ ಸಮಿತಿ ರಾಜ್ಯಾಧ್ಯಕ್ಷ ಬಿ.ಟಿ. ಸಿದ್ದಪ್ಪ, ವಾಲ್ಮೀಕಿ ನಾಯಕ ಸಮಾಜದ ಜಿಲ್ಲಾಧ್ಯಕ್ಷ ಬಿ. ವೀರಣ್ಣ, ಪಾಲಿಕೆ ಮೇಯರ್ ವಿನಾಯಕ ಪೈಲ್ವಾನ್ ಸೇರಿದಂತೆ ಮತ್ತಿತರರು ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳುವರು.

## ನಗರದಲ್ಲಿ ಇಂದು 8ನೇ ರಾಷ್ಟ್ರೀಯ ಆಯುರ್ವೇದ ದಿನಾಚರಣೆ

ಧನ್ವಂತರಿ ಜಯಂತಿಯ ಅಂಗವಾಗಿ ವಿದ್ಯಾನಗರದಲ್ಲಿರುವ ಕುವೆಂಪು ಕನ್ನಡ ಭವನದಲ್ಲಿ ಇಂದು ಬೆಳಿಗ್ಗೆ 10.30 ಕ್ಕೆ 8ನೇ ರಾಷ್ಟ್ರೀಯ ಆಯುರ್ವೇದ ದಿನಾಚರಣೆಯನ್ನು 'ಆರೋಗ್ಯಕ್ಕಾಗಿ ಆಯುರ್ವೇದ' ಎಂಬ ಘೋಷ ವಾಕ್ಯದೊಂದಿಗೆ ಕಾರ್ಯಕ್ರಮ ಆಯೋಜಿಸಲಾಗಿದೆ.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಆಯುಷ್ ಇಲಾಖೆ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಕೆಜಿಎಎಂಒಎ, ಜಿಲ್ಲಾ ಘಟಕ, ಅಶ್ವಿನಿ ತಪೋವನ ಮತ್ತು ಸುಶ್ರುತ ಆಯುರ್ವೇದ ವೈದ್ಯಕೀಯ ಮಹಾವಿದ್ಯಾಲಯಗಳು, ಜಿಲ್ಲಾ ಯೋಗ ಒಕ್ಕೂಟ, ಎಎಫ್‌ಐ ಮತ್ತು ನಿಮಾ ಜಿಲ್ಲಾ ಘಟಕ, ಶ್ರೀ ಧನ್ವಂತರಿ ಆಯುರ್ವೇದ ಔಷಧ ಪ್ರತಿನಿಧಿಗಳ ಸಂಘ, ಆಯುರ್ವೇದ ಔಷಧ ವಿತರಕರು ಮತ್ತು ಮಾರಾಟಗಾರರು ಇವರ ಸಹಯೋಗದಲ್ಲಿ 8ನೇ ರಾಷ್ಟ್ರೀಯ ಆಯುರ್ವೇದ ದಿನಾಚರಣೆಯ ಕಾರ್ಯಕ್ರಮವನ್ನು ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್.ಮಲ್ಲಿಕಾರ್ಜುನ್ ಉದ್ಘಾಟಿಸುವರು. ಹಿರಿಯ ಶಾಸಕ ಡಾ. ಶಾಮನೂರು ಶಿವಶಂಕರಪ್ಪ ಅವರು ಅಧ್ಯಕ್ಷತೆ ವಹಿಸುವರು.

ಜಿ.ಎಂ.ಸಿದ್ದೇಶ್ವರ, ಕೆ.ಎಸ್.ಬಸವಂತಪ್ಪ, ಬಿ.ದೇವೇಂದ್ರಪ್ಪ, ಡಿ.ಜಿ. ಶಾಂತನಗೌಡ, ಬಸವರಾಜು ವಿ.ಶಿವಗಂಗಾ, ಬಿ.ಪಿ ಹರೀಶ್, ಬಿ.ಹೆಚ್. ವಿನಾಯಕ, ಗೀತಾ ದಿಳ್ಳೆಪ್ಪ, ಕೆ.ಅಬ್ದುಲ್ ಜಬ್ಬಾರ್, ಡಾ. ವೆಂಕಟೇಶ್ ಎಂ.ವಿ, ಸುರೇಶ್ ಬಿ. ಇಟ್ನಾಳ್, ಉಮಾ ಪ್ರಶಾಂತ್, ಲೀಲಾವತಿ ಕೆ, ಡಾ. ಅನುರಾಧ ಎಸ್.ಚಂಚಲ್ಕರ್, ಡಾ.ಶಂಕರಗೌಡ ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳುವರು.

## ಕೃಷಿ ಭಾಗ್ಯ ಯೋಜನೆ ಜಾರಿಗೆ ನಿರ್ಧಾರ

ಬೆಂಗಳೂರು, ನ. 9 - 'ಕೃಷಿ ಭಾಗ್ಯ' ಯೋಜನೆಯನ್ನು ಮತ್ತೆ ಜಾರಿ ಮಾಡಲು ಇಂದು ನಡೆದ ಸಚಿವ ಸಂಪುಟ ಸಭೆಯಲ್ಲಿ ನಿರ್ಧರಿಸಲಾಗಿದೆ. ಇದೇ ಸಾಲಿನಲ್ಲಿ 24 ಜಿಲ್ಲೆಗಳ 106 ತಾಲ್ಲೂಕುಗಳಲ್ಲಿ ಈ ಯೋಜನೆ ಅನುಷ್ಠಾನಗೊಳ್ಳಲಿದೆ.

ಸಂಪುಟ ಸಭೆಯ ನಂತರ ಕಾನೂನು ಸಚಿವ ಹೆಚ್.ಕೆ.ಪಾಟೀಲ್ ಅವರು ಈ ವಿಷಯ ತಿಳಿಸಿದ್ದಾರೆ.

**ಬಾಪೂಜಿ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್, ದಾವಣಗೆರೆ**
ಆಡಳಿತ ಕಚೇರಿ, ಹರ್ಡೇಕರ್ ಮಂಜಪ್ಪ ರಸ್ತೆ, ದಾವಣಗೆರೆ-577001

**ನಿಯಮ 8(1) ಪರಿಶಿಷ್ಟ 4**
**-: ಕಬ್ಜೆ (ಸ್ವಾಧೀನ) ವಹಿಸುವ ಬಗೆಗಿನ ತಿಳುವಳಿಕೆ ನೋಟೀಸು:-**
**ಸ್ಥಿರಾಸ್ತಿಗಳಿಗೆ ಸಂಬಂಧಿಸಿದಂತೆ**

ಸೆಕ್ಯೂರಿಟೈಜೇಷನ್ ಮತ್ತು ರಿಕನ್‌ಸ್ಟ್ರಕ್ಷನ್ ಆಫ್ ಫೈನಾನ್ಸಿಯಲ್ ಅಸೆಟ್ ಮತ್ತು ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯೂರಿಟಿ ಇಂಟರೆಸ್ಟ್ ಅಧಿನಿಯಮ 2002ರ ಅನ್ವಯ ಕೆಳ ಸಹಿದಾರರು ಬಾಪೂಜಿ ಕೋ-ಆಪರೇಟಿವ್ ಬ್ಯಾಂಕ್ ಲಿ., ದಾವಣಗೆರೆ ಇದರ ಅಧಿಕಾರ ಹೊಂದಿದ ಅಧಿಕೃತ ಅಧಿಕಾರಿಯಾಗಿದ್ದು ಮತ್ತು ಸೆಕ್ಯೂರಿಟಿ ಇಂಟರೆಸ್ಟ್ (ಎನ್‌ಪೋರ್ಸ್‌ಮೆಂಟ್) ನಿಯಮಗಳು 2002ರ ನಿಯಮ 3 ಮತ್ತು 9 ಓದಿಕೊಂಡಂತೆ, ಕಲಂ 13(2)ರನ್ವಯ ಪ್ರದತ್ತವಾಗಿರುವ ಅಧಿಕಾರಗಳನ್ನು ಚಲಾಯಿಸಿ ಸಾಲಗಾರರಿಗೆ ಸಾಲವನ್ನು ಮರುಪಾವತಿಸಲು ದಿನಾಂಕ 18-08-2023 ರಂದು ತಗಾದೆ ನೋಟೀಸ್‌ಗಳನ್ನು ನೀಡಲಾಗಿತ್ತು. ಸದರಿ ಸೂಚನೆಗಳು ತಲುಪಿದ ದಿನಾಂಕದಿಂದ 60 ದಿವಸದೊಳಗೆ ಸೂಚನೆಯಲ್ಲಿ ಸೂಚಿಸಿರುವ ಮೊಬಲಗನ್ನು ಮರುಪಾವತಿ ಮಾಡಬೇಕಾಗಿತ್ತು. ಸಾಲಗಾರರು ಸಾಲದ ಮೊಬಲಗನ್ನು ಮರುಪಾವತಿ ಮಾಡಿಲ್ಲವಾದ್ದರಿಂದ, ಸಾಲಗಾರರಿಗೆ ಮತ್ತು ಸಮಸ್ತ ಸಾರ್ವಜನಿಕರಿಗೆ ಈ ಮೂಲಕ ಸೂಚಿಸುವುದೇನೆಂದರೆ, ಸದರಿ ನಿಯಮದ ನಿಯಮ 8 ಮತ್ತು 9ನ್ನು ಓದಿಕೊಂಡಂತೆ, ಸದರಿ ಆ್ಯಕ್ಟ್ ಪ್ರಕರಣ 13(4) ರನ್ವಯ ಪ್ರಧತ್ತವಾಗಿರುವ ಅಧಿಕಾರವನ್ನು ಚಲಾಯಿಸಿ, ದಿನಾಂಕ: 10-11-2023 ರಂದು ಈ ಕೆಳಕಂಡ ಸ್ವತ್ತುಗಳನ್ನು ಕೆಳ ಸಹಿದಾರರು ಸಾಂಕೇತಿಕವಾಗಿ ವಶಪಡಿಸಿಕೊಂಡಿರುತ್ತೇವೆ. ನಿರ್ದಿಷ್ಟವಾದ ಸಾಲಗಾರರಿಗೆ ಹಾಗೂ ಸಮಸ್ತ ಸಾರ್ವಜನಿಕರಿಗೆ ಈ ಮೂಲಕ ಎಚ್ಚರಿಕೆ ನೀಡುವುದೇನೆಂದರೆ, ಯಾರೂ ಸದರಿ ಸೊತ್ತುಗಳ ಬಗ್ಗೆ ವ್ಯವಹರಿಸಬಾರದು ಮತ್ತು ಸದರಿ ಸೊತ್ತಿನ ಬಗ್ಗೆ ವ್ಯವಹಾರ ನಡೆದಿದ್ದೇ ಆದರೆ ಬಾಪೂಜಿ ಕೋ-ಆಪರೇಟಿವ್ ಬ್ಯಾಂಕ್ ಲಿ., ದಾವಣಗೆರೆ, ಇದರ ಬಾಕಿ ಇರುವ ಮೊತ್ತ ಮತ್ತು ಇದರ ಮೇಲಿನ ಬಡ್ಡಿ ಬಾಕಿ ಹಾಗೂ ಇತರೆ ಖರ್ಚುಗಳನ್ನು ಚುಕ್ತಾ ಮಾಡುವುದಕ್ಕೆ ಅದು ಒಳಪಟ್ಟಿರುತ್ತದೆ.

**ಸಾಲಗಾರರ ಹೆಸರು ಮತ್ತು ವಿಳಾಸ:**
1) ಶ್ರೀ ಸೈಯದ್ ಅಕ್ಬರ್ ಆಲಿ ಬಿನ್ ಸೈಯದ್ ದಾದಪೀರ್ ಸಾಬ್, ಡೋರ್ ನಂ.1431/11, 3ನೇ ವಾರ್ಡ್, 3ನೇ ಡಿವಿಜನ್, 4ನೇ ಕ್ರಾಸ್, ಕಣದ ರಸ್ತೆ, ಅಹಮದ್ ನಗರ, ದಾವಣಗೆರೆ.
2) ಕಟ್ಟಡ ಸಾಲ, ಬಿಡಿ-21, ಬರಬೇಕಾದ ಸಾಲದ ಮೊತ್ತ ಅಸಲು ರೂ.21,45,832-00 + ಇತರೆ ಖರ್ಚು, (ದಿನಾಂಕ 20-07-2023 ರ ವರೆಗೆ)

**ಜಾಮೀನುದಾರರ ಹೆಸರು ಮತ್ತು ವಿಳಾಸ:**
1) ಮಹಮದ್ ಬಷೀರ್ ಬಿನ್ ಮಹಮದ್ ಪೀರ್ ಸಾಬ್.
2) ಸಣ್ಣ ಬುಡೇನ್‌ವಲ್ಲಿ ಬಿನ್ ಲೇಟ್ ಪಕ್ಕೀರ್‌ಸಾಬ್.

**ಬ್ಯಾಂಕಿಗೆ ಆಧಾರವಾದ ಸ್ಥಿರಾಸ್ತಿಯ ವಿವರ:**
ದಾವಣಗೆರೆ ನಗರದ 3ನೇ ವಾರ್ಡ್, 3ನೇ ಡಿವಿಜನ್, 4ನೇ ಕ್ರಾಸ್, ಕಣದ ರಸ್ತೆ, ಅಹಮದ್ ನಗರದಲ್ಲಿ ಬರತಕ್ಕ ಸೈಟ್ ನಂ.11, ಹಳೆ ಡೋರ್ ನಂ.1431/11, ಮಹಾನಗರಪಾಲಿಕೆ ಡೋರ್ ನಂ.1431/11, 11ಎ, ಚಾಲ್ತಿ ಡೋರ್ ನಂ.1431/11 ರಲ್ಲಿರುವ ನೆಲಮಹಡಿ ಮತ್ತು ಮೊದಲನೇ ಮಹಡಿಯನ್ನು ಹೊಂದಿರುವ ಕಟ್ಟಡ ಇದರ ಅಳತೆ ಪೂರ್ವ-ಪಶ್ಚಿಮ 12 ಅಡಿಗಳು, ಉತ್ತರ-ದಕ್ಷಿಣ 42 ಅಡಿಗಳು, ಸೊತ್ತಿಗೆ ಚೆಕ್ಕುಬಂದಿ:- ಪೂರ್ವಕ್ಕೆ: ಸೈಟ್ ನಂ.12, ಪಶ್ಚಿಮಕ್ಕೆ : ಸೈಟ್ ನಂ.10, ಉತ್ತರಕ್ಕೆ : ರಸ್ತೆ, ದಕ್ಷಿಣಕ್ಕೆ : ರಸ್ತೆ.

ಸಹಿ/-
ಅಧಿಕೃತ ಅಧಿಕಾರಿ
ಬಾಪೂಜಿ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್, ದಾವಣಗೆರೆ

ಸ್ಥಳ : ದಾವಣಗೆರೆ
ದಿನಾಂಕ : 10-11-2023

**ಶಿವ ಸಹಕಾರಿ ಬ್ಯಾಂಕ್ ನಿಯಮಿತ**
ಆಡಳಿತ ಕಛೇರಿ : ಹಳೇ ಆಸ್ಪತ್ರೆ ರಸ್ತೆ, ದಾವಣಗೆರೆ - 577 001. ಫೋನ್ : 256107

**ಸೆಕ್ಯುರಿಟಿ ಇಂಟರೆಸ್ಟ್ (ಎನ್‌ಫೋರ್ಸ್‌ಮೆಂಟ್) ನಿಯಮ 2002**
**ಕಬ್ಜೆ ವಹಿಸುವ ಬಗೆಗಿನ ತಿಳುವಳಿಕೆ ನೋಟೀಸ್**

ಈ ಕೆಳಗೆ ರುಜು ಮಾಡಿರುವ **ಶ್ರೀ ಡಿ.ಜಿ ಸುರೇಶ್, ಪ್ರಧಾನ ವ್ಯವಸ್ಥಾಪಕರು, ಶಿವ ಸಹಕಾರಿ ಬ್ಯಾಂಕ್ ನಿಯಮಿತ, ದಾವಣಗೆರೆ** ಬ್ಯಾಂಕಿನ ಅಧಿಕೃತ ಅಧಿಕಾರಿಯಾದ ನಾನು ಸೆಕ್ಯುರಿಟೈಸೇಷನ್ ಮತ್ತು ರಿಕನ್‌ಸ್ಟ್ರಕ್ಷನ್ ಆಫ್ ಫೈನಾನ್ಸಿಯಲ್ ಅಸೆಟ್ಸ್ ಮತ್ತು ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯುರಿಟಿ ಇಂಟರೆಸ್ಟ್ (ಎರಡನೇ) ಆಧ್ಯಾದೇಶ 2002 (ಆಧ್ಯಾದೇಶ 2002ರ 3) ಕಲಂ 13(12) ಮತ್ತು ಸೆಕ್ಯುರಿಟಿ ಇಂಟರೆಸ್ಟ್ (ಎನ್‌ಫೋರ್ಸ್‌ಮೆಂಟ್) ನಿಯಮ 9ರ ಅಂತರ್ಗತವಾಗಿ ನನ್ನ ಅಧಿಕಾರವನ್ನು ಉಪಯೋಗಿಸಿ **1) ಶ್ರೀ ರಾಜು ಸಿ. ರಾಯ್ಕರ್ ಮತ್ತು ದೀಪಕ್ ಸಿ. ರಾಯ್ಕರ್ ಬಿನ್ ಚಂದ್ರಕಾಂತ ರಾಯ್ಕರ್, #478/3, 5ನೇ ಮೇನ್, 7ನೇ ಕ್ರಾಸ್, ಪಿ.ಜೆ. ಬಡಾವಣೆ, ದಾವಣಗೆರೆ - 577002.** ಇವರಿಂದ ಬ್ಯಾಂಕಿಗೆ ಸಲ್ಲಬೇಕಾದ ಬಾಕಿ ಮೊಬಲಗು ರೂ. 42,51,691-54 (ರೂ. ನಲವತ್ತೆರಡು ಲಕ್ಷದ ಐವತ್ತೊಂದು ಸಾವಿರದ ಆರುನೂರ ತೊಂಬತ್ತೊಂದು ಐವತ್ನಾಲ್ಕು ಪೈಸೆ ಮಾತ್ರ)ಗಳನ್ನು ಪಾವತಿಸುವಂತೆ 60 ದಿನಗಳ ಕಾನೂನುಬದ್ಧ ತಗಾದೆಯನ್ನು ದಿನಾಂಕ 17.08.2023ರಂದು ಕೊಟ್ಟಿದ್ದರೂ ಕೂಡಾ ಈ ಅವಧಿ ಒಳಗೆ ಬಾಕಿದಾರ ಸಾಲಗಾರನು ಸಾಲವನ್ನು ಪಾವತಿಸಲು ವಿಫಲವಾದ ಪ್ರಯುಕ್ತ ಸದರಿ ಕಾನೂನಿನ 13(4) ಮತ್ತು ಸದರಿ ಆಧ್ಯಾದೇಶದ ನಿಯಮ 9 ರಂತೆ ನಾನು ನನ್ನ ಅಧಿಕಾರವನ್ನು ಉಪಯೋಗಿಸಿ, ಈ ಕೆಳಗೆ ಕಂಡ ಸ್ಥಿರ ಆಸ್ತಿಗಳನ್ನು ಬ್ಯಾಂಕಿಗೆ ಬರಬೇಕಾದ ಸಾಲಕ್ಕಾಗಿ ಕಬ್ಜೆ ವಹಿಸಿಕೊಂಡಿರುತ್ತೇವೆ ಎಂದು ಸಾಲಗಾರನಿಗೂ, ಸಾರ್ವಜನಿಕರಿಗೂ ಈ ನೋಟಿಸ್ ಮುಖೇನ ಗಮನಕ್ಕೆ ತರುತ್ತಿದ್ದೇನೆ.

ಸಾಲಗಾರನು ಮತ್ತು ಸಾರ್ವಜನಿಕರು, ಶಿವ ಸಹಕಾರಿ ಬ್ಯಾಂಕ್ ನಿಯಮಿತ, ದಾವಣಗೆರೆ ಬ್ಯಾಂಕಿಗೆ ಬರತಕ್ಕ 42,51,691-54 (ರೂ. ನಲವತ್ತೆರಡು ಲಕ್ಷದ ಐವತ್ತೊಂದು ಸಾವಿರದ ಆರುನೂರ ತೊಂಬತ್ತೊಂದು ಐವತ್ನಾಲ್ಕು ಪೈಸೆ ಮಾತ್ರ) ಋಣ (ಚಾರ್ಜ್) ಮತ್ತು ದಿನಾಂಕ :31.07.2023ರಿಂದ ತಗುಲುವ ಬಡ್ಡಿ ಸೇರಿಸಿ ಸಂದಾಯವಾಗುವ ತನಕ ಸದರಿ ಸ್ಥಿರಾಸ್ತಿಯ ಮೇಲೆ ಯಾವುದೇ ರೀತಿಯ ವ್ಯವಹಾರವನ್ನು ಮಾಡತಕ್ಕದ್ದಲ್ಲ ಎಂದು ಈ ಮೂಲಕ ಎಚ್ಚರಿಕೆಯನ್ನು ಕೊಡುತ್ತಿದ್ದೇವೆ.

**ಸ್ಥಿರಾಸ್ತಿ ವಿವರಗಳು:** ದಾವಣಗೆರೆ ತಾಲ್ಲೂಕು ಸಬ್ ರಿಜಿಸ್ಟ್ರಾರ್‌ರವರ ಕಛೇರಿ ಅಧಿಕಾರಕ್ಕೆ ಒಳಪಟ್ಟ ದಾವಣಗೆರೆ ಸಿಟಿ 5ನೇ ವಾರ್ಡ್, 9ನೇ ವಿಭಾಗ, 7ನೇ ಮೇನ್, 7ನೇ ಕ್ರಾಸ್ ಪಿ.ಜೆ. ಬಡಾವಣೆ, ಸೈಟ್ ನಂ. 189, ಹಳೆಯ ಡೋರ್ ನಂ. 413, ಚಾಲ್ತಿ ಡೋರ್ ನಂ. 443/1, **ಅಳತೆ : ಪೂರ್ವ-ಪಶ್ಚಿಮ** 25 ಅಡಿ, ಮತ್ತು **ಉತ್ತರ-ದಕ್ಷಿಣ** : 55 ಅಡಿವುಳ್ಳ (ಒಟ್ಟು ಅಳತೆ 1375 ಚದರಡಿ) ಜಾಗದ ಪೈಕಿ ಪೂರ್ವ ಭಾಗದ ಕಡೆಗೆ ಬರುವ ಬಾಬ್ತು **ಪೂರ್ವ-ಪಶ್ಚಿಮ** 15 ಅಡಿ, ಮತ್ತು **ಉತ್ತರ-ದಕ್ಷಿಣ** 55 ಅಡಿ ಜಾಗದಲ್ಲಿ (15x55 ಅಡಿ) 825 ಚದರಅಡಿ ಆರ್.ಸಿ.ಸಿ. ವಾಸದ ಮನೆಯನ್ನು ಕಟ್ಟಿಸಿರುವ ಈ ವಾಸದ ಮನೆಗೆ ಚೆಕ್ಕುಬಂದಿ. **ಸೊತ್ತಿಗೆ ಚಕ್ಕುಬಂದಿ:** ಪೂರ್ವಕ್ಕೆ : ಚಂದ್ರಪ್ಪ.ಕೆ ರವರ ಮನೆ, ಪಶ್ಚಿಮಕ್ಕೆ :ಎನ್.ಎಂ. ಮಲ್ಲಿಕಾರ್ಜುನರವರ ಆಸ್ತಿ, ಉತ್ತರಕ್ಕೆ : ರಸ್ತೆ, ದಕ್ಷಿಣಕ್ಕೆ : ಕನ್ಸರ್‌ವೆನ್ಸಿ.

ಸ್ಥಳ : ದಾವಣಗೆರೆ.
ದಿನಾಂಕ: 09.11.2023

ಸಹಿ /- ಪ್ರಧಾನ ವ್ಯವಸ್ಥಾಪಕರು ಮತ್ತು ಅಧಿಕೃತ ಅಧಿಕಾರಿ,
ಶಿವ ಸಹಕಾರಿ ಬ್ಯಾಂಕ್ ನಿಯಮಿತ, ದಾವಣಗೆರೆ.

**ಶಿವ ಸಹಕಾರಿ ಬ್ಯಾಂಕ್ ನಿಯಮಿತ**
ಆಡಳಿತ ಕಛೇರಿ : ಹಳೇ ಆಸ್ಪತ್ರೆ ರಸ್ತೆ, ದಾವಣಗೆರೆ - 577 001. ಫೋನ್ : 256107

**ಸೆಕ್ಯುರಿಟಿ ಇಂಟರೆಸ್ಟ್ (ಎನ್‌ಫೋರ್ಸ್‌ಮೆಂಟ್) ನಿಯಮ 2002**
**ಕಬ್ಜೆ ವಹಿಸುವ ಬಗೆಗಿನ ತಿಳುವಳಿಕೆ ನೋಟೀಸ್**

ಈ ಕೆಳಗೆ ರುಜು ಮಾಡಿರುವ **ಶ್ರೀ ಡಿ.ಜಿ ಸುರೇಶ್, ಪ್ರಧಾನ ವ್ಯವಸ್ಥಾಪಕರು, ಶಿವ ಸಹಕಾರಿ ಬ್ಯಾಂಕ್ ನಿಯಮಿತ, ದಾವಣಗೆರೆ** ಬ್ಯಾಂಕಿನ ಅಧಿಕೃತ ಅಧಿಕಾರಿಯಾದ ನಾನು ಸೆಕ್ಯುರಿಟೈಸೇಷನ್ ಮತ್ತು ರಿಕನ್‌ಸ್ಟ್ರಕ್ಷನ್ ಆಫ್ ಫೈನಾನ್ಸಿಯಲ್ ಅಸೆಟ್ಸ್ ಮತ್ತು ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯುರಿಟಿ ಇಂಟರೆಸ್ಟ್ (ಎರಡನೇ) ಆಧ್ಯಾದೇಶ 2002 (ಆಧ್ಯಾದೇಶ 2002ರ 3) ಕಲಂ 13(12) ಮತ್ತು ಸೆಕ್ಯುರಿಟಿ ಇಂಟರೆಸ್ಟ್ (ಎನ್‌ಫೋರ್ಸ್‌ಮೆಂಟ್) ನಿಯಮ 9ರ ಅಂತರ್ಗತವಾಗಿ ನನ್ನ ಅಧಿಕಾರವನ್ನು ಉಪಯೋಗಿಸಿ **1) ಶ್ರೀ ಚಂದ್ರಕಾಂತ ವಿ. ರಾಯ್ಕರ್ ಬಿನ್ ವಾಸುದೇವ್ ವಿ. ರಾಯ್ಕರ್, #478/3, 5ನೇ ಮೇನ್, 7ನೇ ಕ್ರಾಸ್, ಪಿ.ಜೆ. ಬಡಾವಣೆ, ದಾವಣಗೆರೆ - 577002.** ಇವರಿಂದ ಬ್ಯಾಂಕಿಗೆ ಸಲ್ಲಬೇಕಾದ ಬಾಕಿ ಮೊಬಲಗು ರೂ. 85,44,645-58 (ರೂ. ಎಂಬತ್ತೈದು ಲಕ್ಷದ ನಲವತ್ನಾಲ್ಕು ಸಾವಿರದ ಆರುನೂರ ನಲವತ್ತೈದು ರೂಪಾಯಿ ಐವತ್ತೆಂಟು ಪೈಸೆ ಮಾತ್ರ)ಗಳನ್ನು ಪಾವತಿಸುವಂತೆ 60 ದಿನಗಳ ಕಾನೂನುಬದ್ಧ ತಗಾದೆಯನ್ನು ದಿನಾಂಕ 17.08.2023ರಂದು ಕೊಟ್ಟಿದ್ದರೂ ಕೂಡಾ, ಈ ಅವಧಿ ಒಳಗೆ ಬಾಕಿದಾರ ಸಾಲಗಾರನು ಸಾಲವನ್ನು ಪಾವತಿಸಲು ವಿಫಲವಾದ ಪ್ರಯುಕ್ತ ಸದರಿ ಕಾನೂನಿನ 13(4) ಮತ್ತು ಸದರಿ ಆಧ್ಯಾದೇಶದ ನಿಯಮ 9 ರಂತೆ ನಾನು ನನ್ನ ಅಧಿಕಾರವನ್ನು ಉಪಯೋಗಿಸಿ, ಈ ಕೆಳಗೆ ಕಂಡ ಸ್ಥಿರ ಆಸ್ತಿಗಳನ್ನು ಬ್ಯಾಂಕಿಗೆ ಬರಬೇಕಾದ ಸಾಲಕ್ಕಾಗಿ ಕಬ್ಜೆ ವಹಿಸಿಕೊಂಡಿರುತ್ತೇವೆ ಎಂದು ಸಾಲಗಾರನಿಗೂ, ಸಾರ್ವಜನಿಕರಿಗೂ ಈ ನೋಟಿಸ್ ಮುಖೇನ ಗಮನಕ್ಕೆ ತರುತ್ತಿದ್ದೇನೆ.

ಸಾಲಗಾರನು ಮತ್ತು ಸಾರ್ವಜನಿಕರು, ಶಿವ ಸಹಕಾರಿ ಬ್ಯಾಂಕ್ ನಿಯಮಿತ, ದಾವಣಗೆರೆ ಬ್ಯಾಂಕಿಗೆ ಬರತಕ್ಕ ರೂ. 85,44,645-58 (ರೂ. ಎಂಬತ್ತೈದು ಲಕ್ಷದ ನಲವತ್ನಾಲ್ಕು ಸಾವಿರದ ಆರುನೂರ ನಲವತ್ತೈದು ರೂಪಾಯಿ ಐವತ್ತೆಂಟು ಪೈಸೆ ಮಾತ್ರ) ಋಣ (ಚಾರ್ಜ್) ಮತ್ತು ದಿನಾಂಕ :31.07.2023ರಿಂದ ತಗುಲುವ ಬಡ್ಡಿ ಸೇರಿಸಿ ಸಂದಾಯವಾಗುವ ತನಕ ಸದರಿ ಸ್ಥಿರಾಸ್ತಿಯ ಮೇಲೆ ಯಾವುದೇ ರೀತಿಯ ವ್ಯವಹಾರವನ್ನು ಮಾಡತಕ್ಕದ್ದಲ್ಲ ಎಂದು ಈ ಮೂಲಕ ಎಚ್ಚರಿಕೆಯನ್ನು ಕೊಡುತ್ತಿದ್ದೇವೆ.

**ಸ್ಥಿರಾಸ್ತಿ ವಿವರಗಳು:** ದಾವಣಗೆರೆ ಸಬ್ ರಿಜಿಸ್ಟ್ರಾರ್ ಕಛೇರಿ ವ್ಯಾಪ್ತಿಗೆ ಒಳಪಟ್ಟ ದಾವಣಗೆರೆ ಸಿಟಿ 5ನೇ ವಾರ್ಡ್, ಪಿ.ಜೆ. ಬಡಾವಣೆ, ಹಳೇ ಡೋರ್ ನಂ. 426/3, ಚಾಲ್ತಿ ಡೋರ್ ನಂ. 478/3, ಇಲ್ಲಿರುವ ಅಳತೆ : ಪೂರ್ವ-ಪಶ್ಚಿಮ 75 ಅಡಿ, ಮತ್ತು ಉತ್ತರ-ದಕ್ಷಿಣ : 65 ಅಡಿವುಳ್ಳ ಜಾಗದ ಪೈಕಿ ಪೂರ್ವ-ಪಶ್ಚಿಮ 65 ಅಡಿ ಮತ್ತು ಉತ್ತರ-ದಕ್ಷಿಣ 25 ಅಡಿಯಲ್ಲಿನ ಜಾಗದಲ್ಲಿ 1966-67ನೇ ಸಾಲಿನಲ್ಲಿ (ಒಟ್ಟು ಅಳತೆ 1625 ಚದರಡಿ) ವುಳ್ಳ ಖಾಲಿ ಜಾಗ ಈ ಸದರಿ ಜಾಗದಲ್ಲಿ 990 ಚದರ ಅಡಿ ಆರ್.ಸಿ.ಸಿ. ವಾಸದ ಮನೆಯನ್ನು ಕಟ್ಟಿಸಿರುವ. **ಸೊತ್ತಿಗೆ ಚಕ್ಕುಬಂದಿ:** ಪೂರ್ವಕ್ಕೆ : ಕನ್ಸರ್‌ವೆನ್ಸಿ, ಪಶ್ಚಿಮಕ್ಕೆ :ಮುಖ್ಯರಸ್ತೆ, ಉತ್ತರಕ್ಕೆ : ಕಾಮನ್ ಪ್ಯಾಸೇಜ್, ದಕ್ಷಿಣಕ್ಕೆ : ಕಾಮನ್ ಪ್ಯಾಸೇಜ್.

ಸಹಿ/-
ಪ್ರಧಾನ ವ್ಯವಸ್ಥಾಪಕರು ಮತ್ತು ಅಧಿಕೃತ ಅಧಿಕಾರಿ,
ಶಿವ ಸಹಕಾರಿ ಬ್ಯಾಂಕ್ ನಿಯಮಿತ, ದಾವಣಗೆರೆ.

ಸ್ಥಳ : ದಾವಣಗೆರೆ.
ದಿನಾಂಕ: 09.11.2023

# ಜನಪ್ರತಿನಿಧಿಗಳ ಪ್ರಕರಣಗಳಿಗೆ ವಿಶೇಷ ಪೀಠ

ನವದೆಹಲಿ, ನ. 9 – ಸಂಸದರು ಹಾಗೂ ಶಾಸಕರ ವಿರುದ್ಧದ ಪ್ರಕರಣಗಳ ತ್ವರಿತ ವಿಲೇವಾರಿಗಾಗಿ ಹೈಕೋರ್ಟ್‌ಗಳು ವಿಶೇಷ ಪೀಠ ರಚಿಸಬೇಕು ಹಾಗೂ ಸ್ವಯಂ ಪ್ರೇರಿತವಾಗಿ ಪ್ರಕರಣಗಳ ವಿಚಾರಣೆಯ ನಿಗಾ ವಹಿಸಬೇಕು ಎಂದು ಸುಪ್ರೀಂ ಕೋರ್ಟ್ ತಿಳಿಸಿದೆ.

ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ನೇತೃತ್ವದ ಪೀಠ ಈ ಬಗ್ಗೆ ಎಲ್ಲಾ ಹೈಕೋರ್ಟ್‌ಗಳು ಹಾಗೂ ವಿಚಾರಣಾ ನ್ಯಾಯಾಲಯಗಳಿಗೆ ನಿರ್ದೇಶನಗಳನ್ನು ನೀಡಿದೆ.

ಶಾಸಕರು ಹಾಗೂ ಸಂಸದರ ವಿರುದ್ಧದ ಪ್ರಕರಣಗಳ ತ್ವರಿತ ವಿಲೇವಾರಿಗಾಗಿ ಅಶ್ವಿನಿ ಉಪಾಧ್ಯಾಯ್ ಅವರು ದಾಖಲಿಸಿದ್ದ ಅರ್ಜಿಯ ವಿಚಾರಣೆ ನಡೆಸುವಾಗ ನ್ಯಾಯಾಲಯ ಈ ನಿರ್ದೇಶನಗಳನ್ನು ನೀಡಿದೆ.

### ಹೈಕೋರ್ಟ್‌ಗಳಿಗೆ ಸುಪ್ರೀಂ ಕೋರ್ಟ್ ಸೂಚನೆ

ವಿಚಾರಣಾ ನ್ಯಾಯಾಲಯಗಳು ತ್ವರಿತವಾಗಿ ಪ್ರಕರಣ ವಿಲೇವಾರಿ ಮಾಡಲು ಏಕರೂಪದ ಮಾರ್ಗಸೂಚಿ ರೂಪಿಸುವುದು ಕಠಿಣವಾಗಿದೆ ಎಂದು ಸುಪ್ರೀಂ ಕೋರ್ಟ್ ಹೇಳಿದೆ.

ಶಾಸಕರ ವಿರುದ್ಧದ ಪ್ರಕರಣಗಳ ವಿಚಾರಣೆಯ ಮೇಲೆ ನಿಗಾ ವಹಿಸಲು ಹೈಕೋರ್ಟ್‌ಗಳು ವಿಶೇಷ ಪೀಠ ರಚಿಸಬೇಕು. ಇದಕ್ಕೆ ಮುಖ್ಯ ನ್ಯಾಯಮೂರ್ತಿ ಇಲ್ಲವೇ ಮುಖ್ಯ ನ್ಯಾಯಮೂರ್ತಿಗಳಿಂದ ನಿಯೋಜಿಲ್ಪಟ್ಟವರು ಅಧ್ಯಕ್ಷರಾಗಿರುತ್ತಾರೆ ಎಂದು ಸುಪ್ರೀಂ ಕೋರ್ಟ್ ಹೇಳಿದೆ.

ಜನಪ್ರತಿನಿಧಿಗಳ ವಿರುದ್ಧದ ಅಪರಾಧಿಕ ಪ್ರಕರಣಗಳ ವಿಚಾರಣೆಯ ಸ್ಥಿತಿಯ ಕುರಿತು ವಿಶೇಷ ಕೆಳ ನ್ಯಾಯಾಲಯಗಳಿಂದ ಹೈಕೋರ್ಟ್ ವರದಿ ಪಡೆಯಬಹುದು ಎಂದೂ ಸುಪ್ರೀಂ ಕೋರ್ಟ್ ಹೇಳಿದೆ.

ಅಪರೂಪದ ಹಾಗೂ ಅನಿವಾರ್ಯ ಕಾರಣಗಳಿರದ ಹೊರತು ಜನಪ್ರತಿನಿಧಿಗಳ ವಿರುದ್ಧದ ಪ್ರಕರಣಗಳ ವಿಚಾರಣೆ ನಡೆಸುತ್ತಿರುವ ನ್ಯಾಯಾಲಯಗಳು ವಿಚಾರಣೆ ಮುಂದೂಡಬಾರದು ಎಂದು ಸುಪ್ರೀಂ ಕೋರ್ಟ್ ತಿಳಿಸಿದೆ.

ಈ ಪ್ರಕರಣಗಳ ವಿಚಾರಣೆ ನಡೆಸುವ ವಿಶೇಷ ನ್ಯಾಯಾಲಯಗಳಿಗೆ ಸಮರ್ಪಕ ಮೂಲಭೂತ ಹಾಗೂ ತಂತ್ರಜ್ಞಾನ ಸೌಲಭ್ಯಗಳಿರುವಂತೆ ಕ್ರಮ ತೆಗೆದುಕೊಳ್ಳಬೇಕು ಎಂದು ತಿಳಿಸಲಾಗಿದೆ.

# ಬರ ಚರ್ಚೆಗೆ ಸಿಗದ ಅವಕಾಶ: ರಾಜ್ಯ ಸಂಪುಟದಲ್ಲಿ ಆಕ್ಷೇಪ

ಬೆಂಗಳೂರು, ನ. 9 – ಪ್ರಧಾನ ಮಂತ್ರಿ ನರೇಂದ್ರ ಮೋದಿ ಹಾಗೂ ಕೇಂದ್ರ ಸಚಿವರು ಬರ ಪರಿಸ್ಥಿತಿ ಕುರಿತು ಚರ್ಚೆ ನಡೆಸಲು ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಸಚಿವರಿಗೆ ಕಾಲಾವಕಾಶ ನೀಡಿಲ್ಲ ಎಂದು ರಾಜ್ಯ ಸಂಪುಟದಲ್ಲಿ ತೀವ್ರವಾಗಿ ಆಕ್ಷೇಪಿಸಲಾಗಿದೆ. ಸಂಪುಟ ಸಭೆಯ ನಂತರ ಮಾತನಾಡಿರುವ ಕಾನೂನು ವ್ಯವಹಾರಗಳ ಸಚಿವ ಹೆಚ್.ಕೆ. ಪಾಟೀಲ್, ಪ್ರಧಾನಿ ನರೇಂದ್ರ ಮೋದಿ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯಗೆ ಸಮಯ ನೀಡಿಲ್ಲ. ಕೇಂದ್ರ ಸಚಿವರು ರಾಜ್ಯದ ಸಚಿವರಿಗೆ ಸಮಯ ನೀಡಿಲ್ಲ ಎಂದರು. ಸಚಿವರಾದ ಎನ್. ಚಲುವರಾಯಸ್ವಾಮಿ, ಕೃಷ್ಣ ಭೈರೇಗೌಡ ಹಾಗೂ ಪ್ರಿಯಾಂಕ್ ಖರ್ಗೆ ಅವರು ಇತ್ತೀಚೆಗೆ ನಾಲ್ಕೈದು ದಿನಗಳ ಕಾಲ ದೆಹಲಿಯಲ್ಲಿದ್ದರೂ ಕೇಂದ್ರ ಸಚಿವರನ್ನು ಭೇಟಿ ಮಾಡಲು ಸಾಧ್ಯವಾಗಿರಲಿಲ್ಲ. ಬರದಿಂದಾಗಿ ಬೆಳೆ ನಷ್ಟವಾಗಿದೆ. ಎನ್.ಡಿ.ಆರ್.ಎಫ್. ನಿಯಮಗಳ ಅನ್ವಯ ಪರಿಹಾರ ನೀಡುವ ಬೇಡಿಕೆ ಬಾಕಿ ಇದೆ. ರಾಜ್ಯ ಸರ್ಕಾರ ಈ ಬಗ್ಗೆ ನೀಡಿರುವ ವರದಿಗೆ ಕೇಂದ್ರ ತಂಡ ಮೆಚ್ಚುಗೆ ವ್ಯಕ್ತ ಪಡಿಸಿದೆ. ಆದರೂ, ಬರ ಪರಿಹಾರವಾಗಿ ನಯಾ ಪೈಸೆ ಬಿಡುಗಡೆ ಆಗಿಲ್ಲ. ಈ ಬಗ್ಗೆ ಸಂಪುಟ ತೀವ್ರ ಆಕ್ಷೇಪ ವ್ಯಕ್ತಪಡಿಸಿದೆ ಎಂದು ಸಚಿವ ಪಾಟೀಲ್ ಹೇಳಿದ್ದಾರೆ.




# ಬೆಂಗಳೂರು - ಮೈಸೂರು ನಡುವೆ ಆರೋಗ್ಯ ನಗರ

ಬೆಂಗಳೂರು, ನ.9 - ಬೆಂಗಳೂರು-ಮೈಸೂರು ನಗರಗಳ ನಡುವೆ ನಾಲೆಡ್ಜ್ ಹೆಲ್ತ್ ಸಿಟಿ (ಆರೋಗ್ಯ ಜ್ಞಾನ ನಗರ) ಸ್ಥಾಪಿಸಲು ಸರ್ಕಾರ ಮುಂದಾಗಿದೆ. ವಿಶ್ವದ ಖ್ಯಾತ ಆಸ್ಪತ್ರೆಗಳು, ವಿಶ್ವವಿದ್ಯಾಲಯಗಳು ಹಾಗೂ ಸಂಶೋಧನಾ ಸಂಸ್ಥೆಗಳು ಒಂದೇ ಕೇಂದ್ರದಲ್ಲಿ ನೆಲೆಯೂರಲಿವೆ.

ಅರಮನೆ ನಗರಿ ಮತ್ತು ಮಾಹಿತಿ ತಂತ್ರಜ್ಞಾನ ನಗರದ ನಡುವೆ ಉತ್ತಮ ರಸ್ತೆ, ರೈಲು, ವಿಮಾನ ಸಂಪರ್ಕ ಹಾಗೂ ರಾಜಧಾನಿ ಜೊತೆಗೆ ಚೆನ್ನೈ-ಪುಣೆ ಕೈಗಾರಿಕಾ ಕಾರಿಡಾರ್‌ಗೆ ಸಮೀಪ ಇರುವುದರಿಂದ ಇದನ್ನು ಸ್ಥಾಪಿಸಲು ಸರ್ಕಾರ ಸಿದ್ಧತೆ ನಡೆಸಿದೆ.

ಬೆಂಗಳೂರು ಅಂತರರಾಷ್ಟ್ರೀಯ ನಿಲ್ದಾಣಕ್ಕೆ ಸಮೀಪದಲ್ಲಿ ಒಂದು ಸ್ಥಳ ಸಮೀಕ್ಷೆ ನಡೆಸಲಾಗಿತ್ತು. ಹೆಚ್.ಡಿ.ಕುಮಾರಸ್ವಾಮಿ ಅಧಿಕಾರದಲ್ಲಿದ್ದಾಗ ಉಪ ನಗರ ಸ್ಥಾಪನೆಗಾಗಿ ಈ ಅವಳಿ ನಗರದ ನಡುವೆ 10 ಸಾವಿರ ಎಕರೆ ಗುರುತಿಸಿ ಭೂ ಸ್ವಾಧೀನಕ್ಕೆ ಆದೇಶ ಮಾಡಿದ್ದರು.

# ಹೈಕಮಾಂಡ್ ಸೂಚನೆಯಂತೆ ಸದಾನಂದ ಗೌಡರ ನಿವೃತ್ತಿ



ಬೆಂಗಳೂರು, ನ. 9 - ಹೈಕಮಾಂಡ್ ಸೂಚನೆ ಮೇರೆಗೆ ಸಂಸದ ಹಾಗೂ ಮಾಜಿ ಮುಖ್ಯಮಂತ್ರಿ ಸದಾನಂದ ಗೌಡರು ಚುನಾವಣಾ ರಾಜಕೀಯದಿಂದ ನಿವೃತ್ತಿ ಘೋಷಿಸಿದ್ದಾರೆ ಎಂದು ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ತಿಳಿಸಿದ್ದಾರೆ.

ಸದಾನಂದ ಗೌಡರು ಚುನಾವಣಾ ರಾಜಕೀಯ ತೊರೆದು ಪಕ್ಷದ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಳ್ಳಲಿದ್ದಾರೆ ಎಂದು ಯಡಿಯೂರಪ್ಪ ತಿಳಿಸಿದ್ದಾರೆ. ಈ ಬಾರಿ ಚುನಾವಣೆಯಲ್ಲಿ ಸ್ಪರ್ಧಿಸುವುದು ಬೇಡ ಅಂತ ನೇರವಾಗಿ ವರಿಷ್ಠರು ಅವರಿಗೆ ಹೇಳಿದ್ದಾರೆ. ಆದರೆ ,ಪಕ್ಷದ ಬೇರೆಲ್ಲ ಚಟುವಟಿಕೆಗಳಲ್ಲಿ ಅವರು ತಮ್ಮನ್ನು ಸಕ್ರಿಯವಾಗಿ ತೊಡಗಿಸಿಕೊಳ್ಳಲಿದ್ದಾರೆ ಎಂದರು.

ಚುನಾವಣಾ ರಾಜಕೀಯದಿಂದ ನಿವೃತ್ತಿ ಪಡೆಯುವುದಾಗಿ ಸದಾನಂದ ಗೌಡರು ನಿನ್ನೆಯಷ್ಟೇ ತಿಳಿಸಿದ್ದರು.

